3]

ಗಮಕ ಸಮಾಸ—ಒಂದು ಸಮೀಕ್ಷೆ

—ವಿದ್ವಾನ್ ಎನ್. ರಂಗನಾಥಶರ್ಮಾ

ಗಮಕಸಮಾಸವೆಂಬ ಒಂದು ಸಮಾಸಭೇದವನ್ನು ಕೇಶಿರಾಜನು ಅಂಗೀಕರಿಸಿದ್ದಾನೆ. ಈ ವಿಷಯದಲ್ಲಿ ವಿದ್ವಾಂಸರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವರ ಪ್ರತಿಪಾದನೆ ಏನೆಂಬುದರ ಸ್ಮರಣೆ ನನಗಿಲ್ಲ.* ಆದರೆ ಇತ್ತೀಚೆಗೆ ಡಾ॥ ಎಸ್. ಎಸ್. ಬಿಳಿಗಿರಿಯವರು 'ಗಮಕಸಮಾಸವು ಸಮಾಸವೆ ?' ಎಂಬ ಪ್ರಬಂಧವನ್ನು ಬರೆದಿದ್ದಾರೆ. ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನವು 'ಮೂರು ದತ್ತಿ ಉಪನ್ಯಾಸಗಳು' ಎಂಬ ಹೊತ್ತಿಗೆಯಲ್ಲಿ ಈ ಪ್ರಬಂಧವನ್ನು ಪ್ರಕಟಿಸಿದೆ. ಅದನ್ನೋದಿದಮೇಲೆ ನನ್ನ ಕೆಲವು ವಿಚಾರಗಳನ್ನು ವಿದ್ವಾಂಸರ ಪರಿಶೀಲನೆಗಾಗಿ ಮಂಡಿಸಬೇಕೆಂದು ಮನಸ್ಸಾಯಿತು. ಆದರಿಂದ ಪ್ರಸ್ತುತವಾದದ್ದು ಈ ಲೇಖನ.

ಡಾ॥ ಬಿಳಿಗಿರಿಯವರು "'ಗಮಕ ಸಮಾಸ' ಎಂದು ಕರೆಸಿಕೊಳ್ಳುವ ರೂಪಗಳನ್ನು ವರ್ಣನಾತ್ಮಕ ಭಾಷಾವಿಜ್ಞಾನದ ದೃಷ್ಟಿಯಿಂದ ಪರಿಶೀಲಿಸಿ ಅವುಗಳು ಸಮಾಸಗಳೇ ಅಲ್ಲ ಎಂಬ ನಿಲುವಿಗೆ ನಾನು ಬಂದಿದ್ದೇನೆ" ಎಂದು ಹೇಳಿ, "ನಮ್ಮ ಪ್ರಾಚೀನ ವ್ಯಾಕರಣಗಳಿಗೂ ವರ್ಣನಾತ್ಮಕ ಭಾಷಾವಿಜ್ಞಾನಕ್ಕೂ ಯಾವ ಪೈಪೋಟಿಯೂ ಇಲ್ಲ" ಎಂದಿದ್ದಾರೆ. ಪೈಪೋಟಿಗೆ ನಿಲ್ಲದ ಭಾಷಾವಿಜ್ಞಾನವೇ ಕೇಶಿರಾಜನ ವ್ಯಾಕರಣಶಾಸ್ತ್ರದ ಸಿದ್ಧಾಂತವನ್ನು ಖಂಡಿಸುತ್ತದೆಯೆಂಬುದು ವಿಚಿತ್ರ. "ವ್ಯಾಕರಣಶಾಸ್ತ್ರ ಎಂಬುದು ವರ್ಣನಾತ್ಮಕ ಭಾಷಾವಿಜ್ಞಾನದ ಒಂದು ಶಾಖೆ" ಎಂದಿದ್ದಾರೆ ಡಾ॥ ಬಿಳಿಗಿರಿಯವರು. ಪ್ರಾಚೀನ ಕಾಲದಲ್ಲಿಯೇ ಹುಟ್ಟಿ ಬೆಳೆದು ಹೆಮ್ಮರವಾಗಿ ನಿಂತಿರುವ ವ್ಯಾಕರಣಶಾಸ್ತ್ರವು ಈಚೆಗೆ ಹುಟ್ಟಿ ಚಿಗುರುತ್ತಿರುವ ಭಾಷಾಶಾಸ್ತ್ರದ ಶಾಖೆಯೆನ್ನುವುದೂ ವಿಚಿತ್ರವೇ. ಪ್ರತಿಯಾಗಿ ಭಾಷಾಶಾಸ್ತ್ರವೇ ವ್ಯಾಕರಣಶಾಸ್ತ್ರದ ಅನುಬಂಧ ಅಥವಾ ಪರಿಶಿಷ್ಟ ಎನ್ನುವುದು ಸರಿ. ಇದು ಹೇಗಾದರೂ ಇರಲಿ. ನಮಗೆ ಪ್ರಕೃತವಾದದ್ದು ಗಮಕ ಸಮಾಸ. ವ್ಯಾಕರಣಶಾಸ್ತ್ರದ ದೃಷ್ಟಿಯಿಂದ ಇದು ಸಮಾಸವೆನಿಸಿಕೊಳ್ಳಲು ಅರ್ಹವೆ – ಅಲ್ಲವೆ ? ಎಂಬುದೀಗ ಪರಿಶೀಲನೀಯ.

ವೈಯಾಕರಣರು ಶಬ್ದಗಳನ್ನು ಹೊಸದಾಗಿ ಸೃಷ್ಟಿಸುವುದಿಲ್ಲ. ಕುಂಬಾರನು ಮಡಕೆಗಳನ್ನು ಮಾಡಿಕೊಡುವಂತೆ ಇವರು ಪದಗಳನ್ನು ಬೇಕಾದ ರೀತಿಯಲ್ಲಿ

---

* 'ಗಮಕ ಸಮಾಸ'ದ ವಿಷಯವಾಗಿ ವಿದ್ವಾಂಸರು ಪ್ರತಿಪಾದಿಸಿರುವ ವಾದ–ವಿವಾದಗಳ ಸಂಕ್ಷಿಪ್ತ ಸಮೀಕ್ಷೆಯನ್ನು ಪ್ರೊ॥ ಎಂ. ವಿ. ಸೀತಾರಾಮಯ್ಯನವರ 'ಪ್ರಾಚೀನ ಕನ್ನಡ ವ್ಯಾಕರಣಗಳು' (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ) ಗ್ರಂಥದಲ್ಲಿ ಕಾಣಬಹುದು. —ಸಂ.

ನಿರ್ಮಿಸುವುದಿಲ್ಲ. ಮತ್ತೇನೆಂದರೆ, ಲೋಕದಲ್ಲಿ ಮೊದಲೇ ಬಳಕೆಯಲ್ಲಿರುವ ಶಬ್ದಗಳ ಸ್ವರೂಪವನ್ನು–ಸಾಧುತ್ವವನ್ನು ತೋರಿಸಿಕೊಡುತ್ತಾರೆ. ಲೋಕವಲ್ಲಾದರೋ ಶಬ್ದ–ಅಪಶಬ್ದಗಳೆರಡರ ಬಳಕೆಯೂ ಉಂಟು. ವ್ಯಾಕರಣಶಾಸ್ತ್ರವು ಶಬ್ದಗಳನ್ನು ಎಂದರೆ ಸಾಧುಶಬ್ದಗಳನ್ನು ವಿವೇಚಿಸುತ್ತದೆ. ಸಾಧುಶಬ್ದವೆಂದರೆ ಶಿಷ್ಟಪ್ರಯುಕ್ತವಾದ ಶಬ್ದ. ಶಿಷ್ಟರೆಂದರೆ ಯಾರು ? ಸಂಸ್ಕೃತ ವ್ಯಾಕರಣದ ಶಿಷ್ಟಲಕ್ಷಣ ಜನಪದ ಭಾಷೆಗೆ ಸಲ್ಲದು. ಪ್ರಕೃತದಲ್ಲಿ ಕವಿಗಳನ್ನೂ ಶಾಸ್ತ್ರಕಾರರನ್ನೂ ಸಮಾಜದಲ್ಲಿ ಗಣ್ಯರೆನಿಸಿದ ವಿದ್ಯಾವಂತರನ್ನೂ ಶಿಷ್ಟರೆಂದಿಟ್ಟುಕೊಳ್ಳಬಹುದು.

ಶಬ್ದಗಳಾದರೋ ಅನಂತ. ಅವುಗಳನ್ನು ಎಣಿಸಿ ಪಟ್ಟಿಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ವ್ಯಾಕರಣಶಾಸ್ತ್ರವು ಒಂದು ಲಘುವಾದ ಉಪಾಯವನ್ನು ಹುಡುಕಿ ತೆಗೆದು ಲಕ್ಷಣಗಳ ಮೂಲಕ ಲಕ್ಷ್ಯಗಳನ್ನು ಸೆರೆಹಿಡಿಯುವ ತಂತ್ರವನ್ನು ರೂಪಿಸಿಕೊಂಡಿದೆ. ವ್ಯಾಕರಣಕಾರನು ವಿಶಾಲವಾದ ಶಬ್ದರಾಶಿಯನ್ನು ಬಲ್ಲವನಾಗಿರಲೇಬೇಕು. ಅವೆಲ್ಲವನ್ನೂ ಒಂದು ಕಟ್ಟುಪಾಡಿಗೆ ಅಳವಡಿಸಿ ಹೇಳಬಲ್ಲ ಮಹತ್ತರವಾದ ಕೌಶಲವೂ ಅವನಲ್ಲಿರಬೇಕು.

ಸಾಮಾನ್ಯಸೂತ್ರ (ಉತ್ಸರ್ಗ), ವಿಶೇಷ ಸೂತ್ರ (ಅಪವಾದ) ಗಳ ಮೂಲಕ ವಿಧಿನಿಷೇಧಗಳಿಂದ ವ್ಯಾಕರಣ ರಚನೆ. ಸಂಜ್ಞೆ, ಪರಿಭಾಷೆ, ನಿಯಮ, ಅಧಿಕಾರಗಳು ವಿಭಿನ್ನ ತಂತ್ರಗಳು. ಇವುಗಳಲ್ಲಿ ಸಂಜ್ಞೆಯೇ ಮುಖ್ಯಪಾತ್ರವನ್ನು ನಿರ್ವಹಿಸುತ್ತದೆ. ಧಾತು, ಪ್ರಾತಿಪದಿಕ, ಪ್ರತ್ಯಯ, ಕೃತ್, ತದ್ಧಿತ, ಸಮಾಸ–ಮೊದಲಾದ ಸಂಜ್ಞೆಗಳು ಸಂಸ್ಕೃತ ವ್ಯಾಕರಣದಿಂದ ನೇರವಾಗಿ ತೆಗೆದುಕೊಂಡವೆಂಬುದು ಸ್ಪಷ್ಟವಾಗಿದೆ. ಬಹುಶಃ ಸಂಸ್ಕೃತ ವ್ಯಾಕರಣವೇ ಕನ್ನಡದಲ್ಲಿ ವ್ಯಾಕರಣರಚನೆಗೆ ಉದ್ಬೋಧಕವಾಗಿದೆ. ಸಮಾಸಭೇದಗಳಾದ ಅವ್ಯಯೀಭಾವ, ತತ್ಪುರುಷ, ದ್ವಂದ್ವ, ಬಹುವ್ರೀಹಿಗಳು ಸಂಸ್ಕೃತ ಪದಗಳೇ. ದ್ವಿಗು ಸಮಾಸ ಕರ್ಮಧಾರಯದ ಭೇದ. ಕರ್ಮಧಾರಯ ತತ್ಪುರುಷದ ಒಳಭೇದ. ಕೇಶಿರಾಜನು ಅವ್ಯಯೀಭಾವವೆಂದು ಹೆಸರಿಸುವ ಅಂಗಯ್., ಅಂಗಾಲ್, ಮುಂಗಾಲ್ ಮೊದಲಾದವು ಅವ್ಯಯಗಳಲ್ಲ. ಇವುಗಳಿಗೆ ಅವ್ಯಯೀಭಾವವೆಂಬ ಹೆಸರು ಅಷ್ಟು ಸಮಂಜಸವಲ್ಲವಾದರೂ ಅವನ ಪ್ರಕಾರ ಅವ್ಯಯಗಳೊಡನೆ ಸಮಾಸವಾದ್ದರಿಂದ ಈ ಹೆಸರನ್ನಿಟ್ಟಿದ್ದಾನೆಂದು ಹೇಳಬೇಕಾಗಿದೆ. ತತ್ಪುರುಷಭೇದವಾದ ಅಂಶಿ ಸಮಾಸವೇ ಇದು ಎನ್ನುವುದು ಯುಕ್ತ. 'ಗಮಕ ಸಮಾಸ' ಎಂಬ ಸಂಜ್ಞೆ ಸಂಸ್ಕೃತ ವ್ಯಾಕರಣದಲ್ಲಿಲ್ಲ ಎಂಬುದೊಂದು ವಿಶೇಷ. 'ಗಮಕತ್ವಾತ್ ಸಮಾಸಃ' ಎಂದು ಕೆಲವೆಡೆ ಹೇಳುತ್ತಾರಾದರೂ ಕೇಶಿರಾಜನು ಹೇಳುವ ಗಮಕ ಸಮಾಸಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಸಮಾಸ ಮುಂತಾದ ಸಾಮಾನ್ಯ ಸಂಜ್ಞೆಗಳೂ ಬಹುವ್ರೀಹಿ ಮುಂತಾದ ವಿಶೇಷ ಸಂಜ್ಞೆಗಳೂ ಇಷ್ಟರೂಪಸಿದ್ಧಿಗಾಗಿಯೇ ಹೊರತು ಆಡಂಬರಕ್ಕಾಗಿ ಅಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಹೇಳಿರುವ ಗಮಕ ಸಮಾಸದ ಲಕ್ಷಣ ಹೀಗಿದೆ—

ಜನಿಯಿಸುಗುಂ ಸಂಖ್ಯಾಸ-
ರ್ವನಾಮ ಗುಣವಚನ ಕೃತ್‌ಪ್ರಪೂರ್ವಂ ಗಮಕಂ ।
ತನಗತ್ವಂ ಪೆಜಗಿತ್ವಂ
ತನಗುಪದನಿಲ್ಲ ಕರ್ಮಧಾರಯಮದುವುಂ ॥ ಸೂ. ೧೭೯ ॥

ಈ ಸೂತ್ರದ ವೃತ್ತಿ ಹೀಗಿದೆ—"ಪರಪದದೊಳ್ ಕಾರಕಮುಂ ಪೂರ್ವಪದ ದೊಳ್ ಸಂಖ್ಯಾಸರ್ವನಾಮಗುಣವಚನಕೃತ್‌ಪದಂಗಳಾವುವಿರ್ದೊಡಂ ಗಮಕಸಮಾಸ ಮಕ್ಕುಂ. ಇದಱೊಳ್ ಅರಿಸಮಾಸದೋಷಮಿಲ್ಲ. ಅದು ಕರ್ಮಧಾರಯದ ಭೇದಂ. ಎತ್ತಾನುಂ ತತ್ಪುರುಷಮಪ್ಪುದು."

ಇದಕ್ಕೆ ಕೊಟ್ಟಿರುವ ಉದಾಹರಣೆಗಳನ್ನು ಪರಿಶೀಲಿಸುವುದಕ್ಕೆ ಮೊದಲು, ಈ ಸೂತ್ರವೃತ್ತಿಗಳ ಅಭಿಪ್ರಾಯವೇನೆಂದು ಗಟ್ಟಿಮಾಡಿಕೊಳ್ಳಬೇಕಾಗಿದೆ. ಸಂಖ್ಯೆ, ಸರ್ವನಾಮ, ಗುಣವಚನ, ಕೃದಂತ–ಇವುಗಳಲ್ಲಿ ಯಾವುದಾದರೂ ಪೂರ್ವಪದ ವಾಗಿರುವ ಸಮಾಸಕ್ಕೆ ಗಮಕ ಸಮಾಸವೆಂದು ಸಂಜ್ಞೆ—ಎಂಬುದಾಗಿ ಸೂತ್ರದ ಪೂರ್ವಾರ್ಧದ ಅರ್ಥವಾಗುತ್ತದೆ. ಸಂಖ್ಯಾದಿ ಶಬ್ದಗಳು ಯಾವ ವಿಭಕ್ತಿಯಲ್ಲಿರ ಬೇಕೆಂದಾಗಲಿ ಸಮಾಸವು ಯಾವ ಅರ್ಥದಲ್ಲಿ ಬರುತ್ತದೆಯೆಂದಾಗಲಿ ಹೇಳಿಲ್ಲವಾದ್ದ ರಿಂದ ಸಮಾಸಸ್ವರೂಪದ ನಿರ್ಧಾರಣೆಯೇ ಆಗುವುದಿಲ್ಲ. ಆದರೆ 'ಕರ್ಮಧಾರಯ-ಮದುವುಂ' ಎಂದು ಸೂತ್ರದಲ್ಲಿಯೂ 'ಎತ್ತಾನುಂ ತತ್ಪುರುಷಮಪ್ಪುದು' ಎಂದು ವೃತ್ತಿಯಲ್ಲಿಯೂ ಹೇಳಿರುವುದರಿಂದ ಸಮಾಸದ ಸ್ವರೂಪವನ್ನು ಊಹಿಸಿಕೊಳ್ಳ ಬಹುದು. ಸಂಖ್ಯಾಪೂರ್ವಪದವಾದ ಕರ್ಮಧಾರಯಕ್ಕೆ ದ್ವಿಗು ಸಂಜ್ಞೆಯಿರುವುದ ರಿಂದ ದ್ವಿಗುವನ್ನೂ ಇದರಲ್ಲಿ ಸಮಾವೇಶಮಾಡಿಕೊಳ್ಳುವುದು ಸಮಂಜಸ.

ಇದು ಸಂಜ್ಞಾಸೂತ್ರವೊ ಅಥವಾ ವಿಧಿಸೂತ್ರವೊ ? ವಿಧಿಸೂತ್ರವಾಗಬೇಕಾ ದರೆ ಅಜ್ಞಾತಜ್ಞಾಪಕವಾಗಬೇಕು, ಎಂದರೆ, ಸೂತ್ರಾಂತರದಿಂದ ಅಪ್ರಾಪ್ತವಾದದ್ದನ್ನು ವಿಧಿಸಿದರೆ ವಿಧಿಯಾಗುತ್ತದೆ. ತತ್ಪುರುಷ, ಕರ್ಮಧಾರಯಗಳೆರಡನ್ನೂ ಬೇರೆ ಸೂತ್ರಗಳಿಂದ ವಿಧಿಸಿರುವ ಪ್ರಯುಕ್ತ ಆ ಸಮಾಸಗಳು ಪ್ರಾಪ್ತವಾಗಿಯೇ ಇವೆ. ಈ ಸೂತ್ರವಿಲ್ಲದಿದ್ದರೂ ಸಂಖ್ಯಾದಿ ಪೂರ್ವಪದಗಳಿಗಿರುವ ತತ್ಪುರುಷವೂ ಕರ್ಮಧಾರಯವೂ ಸಿದ್ಧವಾಗುತ್ತವೆ. ಗಮಕಸಮಾಸಕ್ಕೆ ಕೊಟ್ಟಿರುವ ಉದಾಹರಣೆ ಗಳೆಲ್ಲವೂ ಸಮಾಸವಿಧಾಯಕಗಳಾದ ಸೂತ್ರಾಂತರಗಳಿಂದಲೇ ಸಿದ್ಧವಾಗುತ್ತವೆ. ಆದ್ದರಿಂದ ಇದು ಸಂಜ್ಞಾಸೂತ್ರವೇ ಹೊರತು ವಿಧಿಸೂತ್ರವಲ್ಲ. ತಾತ್ಪರ್ಯ ವೇನಾಯಿತೆಂದರೆ–ಸಂಖ್ಯಾ ಸರ್ವನಾಮಾದಿಗಳಲ್ಲಿ ಯಾವುದಾದರೊಂದು ಪೂರ್ವಪದ

ವಾಗಿರುವ ತತ್ಪುರುಷ, ಕರ್ಮಧಾರಯ, ದ್ವಿಗು ಸಮಾಸಗಳಿಗೆ 'ಗಮಕಸಮಾಸ' ಎಂಬ ಇನ್ನೊಂದು ಹೆಸರೂ ಉಂಟು.

ಈ ಸೂತ್ರದ ಅಡಿಯಲ್ಲಿ ಗ್ರಂಥಕಾರನು ವಿಶಿಷ್ಟವಾದ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಅವಲ್ಲದೆ ತತ್ಸದೃಶವಾದ ಕೆಲವೇ ಉದಾಹರಣೆಗಳು ಮಾತ್ರ ಗಮಕವೆಂದು ಕೆಲವರು ಭಾವಿಸಿದಂತೆ ಕಾಣುತ್ತದೆ. ಸೂತ್ರದ ಪ್ರಕಾರ ತೂಗುಂಜೊಡರ್, ಬೆಳ್ನೊರೆ, ನಾಲ್ವೆರಲ್, ನೂರ್ಮಡಿ, ಕೆಂಜಡೆ, ಕಟ್ಬಾಳ್— ಮೊದಲಾದವೂ ಗಮಕ ಸಮಾಸಗಳೇ ಎಂದು ಹೇಳಬೇಕಾಗುತ್ತದೆ. ಆದರೆ ಸೂತ್ರದಲ್ಲಿ 'ತನಗತ್ವಂ ಪೆಱಗಿತ್ವಂ' ಎಂದು ಹೇಳಿದೆ. ಹಾಗೆಂದರೇನು? ವೃತ್ತಿಯಲ್ಲಿ 'ಗುಣವಚನದೊಳಂತರಾಳಕ್ಕೆ ಒಂದಕಾರಂ, ಪಿಂತಣ ಮೆಯ್ಯೊಳ್ ಇಕಾರಮಕ್ಕುಂ' ಎಂದು ಅರ್ಥವನ್ನು ಬರೆದಿದೆ. ಉದಾಹರಣೆಯಾಗಿ ಅಸಿಯ ನಡು, ಪಸಿಯ ಬಣ್ಣಂ, ಬಿಳಿಯ ಕರ್ಬು—ಮುಂತಾದವನ್ನು ತೋರಿಸಲಾಗಿದೆ.

ಪ್ರಕೃತ, 'ತನಗತ್ವಂ' ಎಂಬಲ್ಲಿ ತನಗೆ ಎಂದರೆ ಗುಣವಚನವೆಂಬ ಅರ್ಥ ದೊರೆಯುವುದು ಹೇಗೆ? ತನಗೆ ಎಂಬ ಸರ್ವನಾಮದಿಂದ ಪ್ರಾಕೃತವಾದ ಗಮಕ ಸಮಾಸವನ್ನೋ ಅಥವಾ ಪೂರ್ವಪದಗಳಾಗುವ ಸಂಖ್ಯಾಸರ್ವನಾಮಾದಿಗಳನ್ನೋ ಗ್ರಹಿಸಬಹುದೇ ಹೊರತು ಬರಿಯ ಗುಣವಚನವನ್ನು ಗ್ರಹಿಸುವುದು ಶಕ್ಯವಲ್ಲ. ವೃತ್ತಿಯಲ್ಲಿ ಹಾಗೆ ಬರೆದಿರುವುದರಿಂದ 'ಆಗಲಿ' ಎನ್ನಬೇಕಾಗಿದೆ. ಅತ್ವ, ಇತ್ವಗಳ ವಿಧಿಯಂತೂ ತುಂಬ ವಿಚಿತ್ರವಾದದ್ದು.

ಅಸಿದು + ನಡು = ಅಸಿಯ ನಡು. ಪಸಿದು + ಬಣ್ಣಂ = ಪಸಿಯ ಬಣ್ಣಂ.

ಬಿಳಿದು + ಕರ್ಬು = ಬಿಳಿಯ ಕರ್ಬು. ಇಲ್ಲಿ 'ದು' ಶಬ್ದಕ್ಕೆ ಅತ್ವ ಬಂದಿದೆ. ಈ ಅಕಾರ ಗುಣವಚನದ ಅಂತ್ಯದಲ್ಲಿರುವ 'ದು' ಎಂಬುದಕ್ಕೆ ಬಂದಿದೆ. ವೃತ್ತಿಕಾರನು ಅಂತರಾಳಕ್ಕೆ ಎಂದು ಬರೆದಿದ್ದಾನೆ! 'ಗುಣವಚನಸಹಿತವಾದ ಗಮಕದ ಅಂತರಾಳಕ್ಕೆ' ಎಂದರೆ ಪೂರ್ವಪದದ ಅಂತ್ಯ 'ದು' ಶಬ್ದಕ್ಕೆ ಎಂದು ಅರ್ಥಮಾಡಿಕೊಂಡು ಸಮಾಧಾನಪಟ್ಟುಕೊಳ್ಳಬೇಕಾಗಿದೆ. ಇನ್ನು ಇತ್ವ ವಿಧಿ ವ್ಯರ್ಥವೇ. ಉದಾಹೃತ ಗುಣವಚನದಲ್ಲಿ ಇ ಕಾರ ಇದ್ದೇ ಇದೆ. ಕೇಶಿರಾಜನ ಶಾಸ್ತ್ರದ 'ಧಾಟಿ' ಯನ್ನರಿಯುವುದು ತುಂಬ ಕಷ್ಟ. ಇಕಾರ–ಅಕಾರಗಳ ನಡುವೆ ಯಕಾರಾಗಮ ಬಂದಿದೆ. ಗುಣವಚನಪೂರ್ವಸಮಾಸದಲ್ಲಿ 'ತನಗತ್ವಂ ಪೆಱಗಿತ್ವಂ' ಎಂಬುದಕ್ಕೆ ಯಾವುದು ಲಕ್ಷ್ಯವೋ ('ಅಸಿಯ ನಡು, ಪಸಿಯ ಬಣ್ಣಂ' ಮುಂತಾದದ್ದು) ಅದು ಗಮಕಸಮಾಸವೆಂದೂ ಕೆಂಜಡೆ, ಕಟ್ಬಾಳ್ ಮೊದಲಾದದ್ದು ಗುಣವಚನಪೂರ್ವವಾದರೂ ಗಮಕಸಮಾಸವಲ್ಲವೆಂದೂ ಕೇಶಿರಾಜನ ಆಶಯವಿದ್ದರೂ ಇರಬಹುದು.

ಹೀಗೆ ಒಪ್ಪುವುದಾದರೆ ಎಳೆಯ ಬಳ್ಳಿ, ಹಳೆಯ ಕನ್ನಡ–ಇವು ಗಮಕಸಮಾಸಗಳಾಗುವುದಿಲ್ಲ. ಅತ್ವ ಇಲ್ಲಿ ಬಂದಿದ್ದರೂ ಇತ್ವ ಬಂದಿಲ್ಲ; 'ಪಸಿಯ ಬಣ್ಣಂ'

ಎಂಬಲ್ಲಿರುವಂತೆ ಇಕಾರವೂ ಇಲ್ಲ. ಮೊದಲೇ ಹೇಳಿದಂತೆ ಈ ಸೂತ್ರವು ಅಪೂರ್ವ ವಿಧಿಯಲ್ಲ. ಇದನ್ನು ಹೇಳದಿದ್ದರೂ ಸಮಾಸ ಬರಲಡ್ಡಿಯಿಲ್ಲ. ಆದರೆ ಈ ಸೂತ್ರ ದಿಂದ ಹೊಸದಾಗಿ ಗೊತ್ತಾಗತಕ್ಕ ಅಂಶಗಳು ಮೂರು—

೧. ಕರ್ಮಧಾರಯದಲ್ಲಿ ಗುಣವಚನದ 'ದು' ಶಬ್ದಕ್ಕೆ ಅಕಾರಾದೇಶ ಬರುತ್ತದೆ.

೨. ಇದಕ್ಕೆ ಅರಿಸಮಾಸ ದೋಷವಿಲ್ಲ (ಇದಕರಿಪದನಿಲ್ಲ).

೩. ಈ ಸಮಾಸಕ್ಕೆ ಗಮಕ ಎಂದು ಸಂಜ್ಞೆ.

ಶಬ್ದಾನುಶಾಸನವನ್ನು ರಚಿಸಿದ ಭಟ್ಟಾಕಳಂಕನು ಕೇಶಿರಾಜನ ತರುವಾಯ ದವನು. ಈತನು ಶಬ್ದಮಣಿದರ್ಪಣವನ್ನು ನೋಡಿಯೇ ಇದ್ದಾನೆ. ಇವನು ದೊಡ್ಡ ವಿದ್ವಾಂಸ. ವಿಧಿನಿಯಮಗಳಿಗೆ ಯಾವ ದೋಷವೂ ಬರದಂತೆ ಶಾಸ್ತ್ರಶುದ್ಧ ವಾಗಿ ಬರೆಯುತ್ತಾನೆ. ಪ್ರಕೃತ ಭಟ್ಟಾಕಳಂಕನ ಈ ಸೂತ್ರ ಗಮನಾರ್ಹವಾದದ್ದು–

ಕೃತ್‌ಸಂಖ್ಯಾದ್ವಾದಿಗುಣೋಕ್ತಿಃ ಸಂಸ್ಕೃತೇನ ಚ ॥ ಸೂ ೨೯೪ ॥

"ಕೃದಂತ, ಸಂಖ್ಯಾವಾಚಕ, ಅದ್ವಾದಿ ಗಣಪಠಿತವಾದ ಶಬ್ದ, ಗುಣವಾಚಕ– ಇವು ಪ್ರಕೃತಿಯಾಗಿರುವ ಸುಬಂತಶಬ್ದವು ಕನ್ನಡಪದದೊಡನೆಯೂ ಸಂಸ್ಕೃತಪದ ದೊಡನೆಯೂ ಸಮಾಸ ಹೊಂದುತ್ತದೆ."

ಸುಬಂತವೆಂದರೆ ನಾಮಪದ. ಸಮಾಸಪ್ರಕರಣದ ಆದಿಯಲ್ಲೇ ಈ ಸೂತ್ರ ಇದೆ. ಭಟ್ಟಾಕಳಂಕನ ಪ್ರಕಾರ ಇದು ಅಧಿಕಾರಸೂತ್ರ, ವಿಧಿಸೂತ್ರವಲ್ಲ. ಇದರಿಂದ ಯಾವ ಸಮಾಸವನ್ನೂ ವಿಧಿಸುವುದಿಲ್ಲ. ಮುಂದಿನ ಎಲ್ಲ ಸಮಾಸವಿಧಿಸೂತ್ರ ಗಳಲ್ಲಿಯೂ ಇದಕ್ಕೆ ಅನುವೃತ್ತಿಯುಂಟು. ಮುಂದಿನ ಎಲ್ಲ ವಿಧಿಗಳಲ್ಲಿಯೂ ಕೃದಂತಸಂಖ್ಯಾದಿಗಳು ಸಂಸ್ಕೃತಶಬ್ದದೊಡನೆಯೂ ಸಹ ಸಮಾಸ ಹೊಂದುತ್ತವೆ ಎಂದರ್ಥ. ಇವುಗಳೊಡನೆ ಸಮಾಸವಾದಾಗ ಅರಿಸಮಾಸದೋಷವಿಲ್ಲವೆಂದು ಮುಖ್ಯ ತಾತ್ಪರ್ಯ. ಈ ಸೂತ್ರದಲ್ಲಿ ಅದ್ವಾದಿಯೆಂದರೆ ಅದು, ಇದು, ಉದು, ಯಾವುದು–ಮುಂತಾದ ಸರ್ವನಾಮ. ಈಗ—

ಜನಿಯಿಸುಗುಂ ಸಂಖ್ಯಾಸ-
ರ್ವನಾಮ ಗುಣವಚನ ಕೃತ್‌ಪ್ರಪೂರ್ವಂ ಗಮಕಂ ॥

ಎಂಬ ಕೇಶಿರಾಜನ ಸೂತ್ರಕ್ಕೂ ಮೇಲ್ಕಂಡ ಭಟ್ಟಾಕಳಂಕನ ಸೂತ್ರಕ್ಕೂ ಅರ್ಥದಲ್ಲಿ ಯಾವ ವ್ಯತ್ಯಾಸವಿದೆ ? ಇಲ್ಲಿ ಅರಿಪದದೋಷವಿಲ್ಲವೆಂಬುದನ್ನು ಈರ್ವರೂ ಒಪ್ಪಿ ದ್ದಾರೆ. ಕೇಶಿರಾಜನು ತತ್ಪುರುಷ, ಕರ್ಮಧಾರಯಗಳಿಗೆ ಮಾತ್ರ ಈ ನಿಯಮ ವನ್ನು ಅನ್ವಯಿಸಿದರೆ, ಭಟ್ಟಾಕಳಂಕನು ಎಲ್ಲ ಸಮಾಸಗಳಿಗೂ ಸಾಮಾನ್ಯವಾಗಿ

ಈ ನಿಯಮವನ್ನು ಒಪ್ಪಿದ್ದಾನೆ. ಇದರಿಂದ ನಾಲ್ಕು ಭುಜಗಳು ಯಾರಿಗೋ ಅವನು ನಾಲ್ಭುಜನ್, ಪಿರಿಯ ಗುಣನ್ – ಮುಂತಾದ ಬಹುವ್ರೀಹಿಯೂ ಭಟ್ಟಾಕಳಂಕನ ಮತದಲ್ಲಿ ಸಿದ್ಧಿಸುತ್ತದೆ. ಹಿಂದೆ ಹೇಳಿದಂತೆ ಗಮಕ ಸಮಾಸವು ನೂತನ ಸಮಾಸ ವಲ್ಲವೆಂಬುದು ಇದರಿಂದ ನಿಶ್ಚಿತವಾಯಿತು. ನಾಲ್ಭುಜನ್–ಮೊದಲಾದ ಬಹುವ್ರೀಹಿ ಯನ್ನು ಕೇಶಿರಾಜನು ಒಪ್ಪುವುದಾದರೆ, 'ಕರ್ಮಧಾರಯಮದುವುಂ' ಎಂದು ಅವನು ಹೇಳಿದ್ದು ಬಹುವ್ರೀಹಿಗೂ ಉಪಲಕ್ಷಣ ಎಂದು ತಿಳಿಯಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ 'ಗಮಕ ಸಮಾಸವು ಸಮಾಸವೆ ?' ಎಂಬ ಪ್ರಶ್ನೆಯೇ ಅಸಂಗತ ; 'ಸಂಖ್ಯಾಸರ್ವನಾಮ ಗುಣವಚನ ಕೃದಂತಪೂರ್ವಕವಾದ ಸಮಾಸವು ಸಮಾಸವೆ ?' ಎಂದಿಷ್ಟೇ ಪ್ರಶ್ನೆಯಾಗಿ ಉಳಿಯುತ್ತದೆ.

ಇಷ್ಟರೂಪದ ಸಿದ್ಧಿಯಂತೂ ವ್ಯಾಕರಣದ ಪ್ರಯೋಜನವಾಯಿತಷ್ಟೆ. ಅದರ ಜೊತೆಗೆ ಅನಿಷ್ಟರೂಪದ ನಿವೃತ್ತಿಯೂ ಪ್ರಯೋಜನವೆಂದು ನೆನಪಿನಲ್ಲಿಡಬೇಕು. ಇಷ್ಟೇ ಅಲ್ಲ. ಇನ್ನೊಂದು ಮುಖ್ಯವಾದ ಅಂಶವಿದೆ. ವ್ಯಾಕರಣದಲ್ಲಿ ಸಮಾಸ ವನ್ನು ಸಮಾಸವೃತ್ತಿಯೆನ್ನುತ್ತಾರೆ. 'ಪರಾರ್ಥಾಭಿಧಾನಂ ವೃತ್ತಿಃ'. ಸಮಾಸಾ-ವಯವ ಶಬ್ದಗಳ ಅರ್ಥವೇ ಅಲ್ಲದೆ ಇನ್ನೊಂದು ಹೊಸ ಅರ್ಥವೂ ಅದರಲ್ಲಿ ಸೇರಿರು ತ್ತದೆ. ಈ ಅರ್ಥವಿಶೇಷವನ್ನು ವಿಗ್ರಹವಾಕ್ಯದಿಂದ ತೋರಿಸಲಾಗುತ್ತದೆ. ಅವಯವ ಶಬ್ದಗಳಿಗಿಂತ ಹೆಚ್ಚಿನ ಅರ್ಥ ಎಲ್ಲಿ ತೋರುತ್ತದೆಯೋ ಅದು ಸಮಾಸದಿಂದಲೇ ತೋರುತ್ತದೆಯೆಂದು ವೈಯಾಕರಣರ ಸಿದ್ಧಾಂತ.

ಕೇಶಿರಾಜನು ಗಮಕ ಸಮಾಸಕ್ಕೆ ಕೊಟ್ಟ ಉದಾಹರಣೆಗಳನ್ನು ಈಗ ಪರೀಕ್ಷಿಸ ಬಹುದು. (ಸೂತ್ರ ೧೬೮.)

೧. ಪ್ರಯೋಗಂ–ಸಂಖ್ಯೆಗೆ

> ಇರ್ಪತ್ತೈದು, ನೂಱುಪತ್ತು ಮೂವತ್ತಾರು
> 'ಮೂವತ್ತಾರುಂ ಗುಣಂಗಳ್ ತಮಗಮರ್ದಿರೆ'

ಇಲ್ಲಿ ವಿಗ್ರಹವಾಕ್ಯ ಹೇಗೆ ? ಇದು ಯಾವ ಸಮಾಸ ? ಕೇಶಿರಾಜನ ಪ್ರಕಾರ ಇದು ಕರ್ಮಧಾರಯವಾಗಬೇಕು. ಇರ್ಪತ್ತು ಸಹಿತವಾದ ಅಥವಾ ಇಪ್ಪತ್ತು ಅಧಿಕವಾದ ಐದು ಇರ್ಪತ್ತೈದು–ಎಂದು ವಿಗ್ರಹ ಹೇಳಬೇಕಾಗುತ್ತದೆ. ಮಧ್ಯಮ ಪದ ಲೋಪ ಕರ್ಮಧಾರಯ. 'ಸಹಿತ' ಅಥವಾ 'ಅಧಿಕ' ಶಬ್ದ ಲುಪ್ತವಾಗಿದೆ. ಹಾಗಲ್ಲದೆ ಇರ್ಪತ್ತು ಮೇಣ್ ಐದು–ಎಂದು ದ್ವಂದ್ವಸಮಾಸವನ್ನೂ ಮಾಡಬಹುದು. ಸಂಸ್ಕೃತದಲ್ಲಿಯೂ 'ದ್ವಾದಶ, ಪಂಚವಿಂಶತಿ' ಮೊದಲಾದವು ಮೇಲ್ಕಂಡಂತೆ ಕರ್ಮಧಾರಯವೆಂದೂ ದ್ವಂದ್ವವೆಂದೂ ಎರಡು ಪಕ್ಷಗಳಿವೆ. 'ಪಂಚಾಧಿಕಾ ವಿಂಶತಿಃ ಪಂಚವಿಂಶತಿಃ' ಎಂದು ಹೇಳಿ 'ಅಧಿಕ' ಶಬ್ದವನ್ನು ಲೋಪಮಾಡುವುದೂ ಉಂಟು. ಭಟ್ಟಾಕಳಂಕನ ಮತದಲ್ಲಿ ಇರ್ಪತ್ತೈದು ಮೊದಲಾದವು ದ್ವಂದ್ವಸಮಾಸಗಳು.

ಇವು ಸಮಾಸಗಳೆನ್ನುವುದಕ್ಕೆ ಗಮಕಗಳೇನು ?

(ಅ) ನಡುವೆ ಇನ್ನೊಂದು ಶಬ್ದವನ್ನು ತುರುಕಲಾಗುವುದಿಲ್ಲ.

ಇರ್ಪತ್ತು ನನಗೆ ಐದು ಹಣ್ಣುಗಳು ಬೇಕು ಎನ್ನಲಾಗದು.

(ಆ) ಪೂರ್ವಪದದಮೇಲೆ ವಿಭಕ್ತಿಪ್ರತ್ಯಯ ಬರುವುದಿಲ್ಲ.

ಇಪ್ಪತ್ತೈದನ್ನು ಕೊಡುತ್ತಾನೆ ಎನ್ನುತ್ತೇವೆಯೇ ಹೊರತು ಇಪ್ಪತ್ತನ್ನೂ ಐದನ್ನೂ ಕೊಡುತ್ತಾನೆ ಎನ್ನುವುದಿಲ್ಲ. ಹೂ ಹಣ್ಣುಗಳನ್ನು ಕೊಡುತ್ತಾನೆ ಎಂಬಲ್ಲಿ ಸಮಾಸವಾಗದಿದ್ದಾಗ ಹೂವನ್ನೂ ಹಣ್ಣನ್ನೂ ಕೊಡುತ್ತಾನೆ ಎಂದಾಗುತ್ತದೆಯಲ್ಲವೆ ?

(ಇ) ಇಲ್ಲಿ ಇಪ್ಪತ್ತು ಐದು – ಇವುಗಳ ಸಂಕಲನದಿಂದಾದ ಸಮುದಾಯಸಂಖ್ಯೆ ತೋರುತ್ತದೆಯೇ ಹೊರತು ಬಿಡಿಬಿಡಿಯಾಗಿ ಎರಡು ಸಂಖ್ಯೆಗಳು ತೋರುವುದಿಲ್ಲ. ಸಂಕಲನರೂಪವಾದ ಹೊಸ ಅರ್ಥ ಸಮಾಸದಿಂದ ಬಂದದ್ದು. ಸಮಾಸವಾಗದಿದ್ದರೆ ಈ ಸಮುದಾಯಾರ್ಥವು ಪ್ರತೀತವಾಗುವುದು ಹೇಗೆ ? ಆದ್ದರಿಂದಲೇ 'ಪರಾರ್ಥಾಭಿಧಾನಂ ವೃತ್ತಿಃ' ಎಂದು ಹೇಳಿದ್ದು.

(ಈ) 'ಮೂವತ್ತಾರುಂ ಗುಣಂಗಳ್' ಎಂಬಲ್ಲಿ ಸಮುಚ್ಚಯಬೋಧಕವಾದ 'ಉಂ' ಸಮುದಾಯಸಂಖ್ಯೆಯಲ್ಲಿ ಅನ್ವಿತ. ಸಮಾಸವಲ್ಲದಿದ್ದರೆ 'ಮೂವತ್ತುಂ ಆರುಂ' ಎಂದು ಎರಡು ಕಡೆ ಇದರ ಪ್ರಯೋಗವಾಗಬೇಕಾಗುತ್ತದೆ, ರಾಮನುಂ, ಕೃಷ್ಣನುಂ ಎಂಬಂತೆ.

ಕೇಶಿರಾಜನು ಕೊಟ್ಟ ಉದಾಹರಣೆಗಳು ದಿಕ್‌ಪ್ರದರ್ಶನ ಮಾತ್ರ. ಪನ್ನೊಂದು, ಪದಿನೆಂಟು, ಎಂಬಯ್ ಸಾಸಿರಂ – ಮೊದಲಾದವೆಲ್ಲ ಉದಾಹರಣೆಗಳೇ. ಇವು ಸಮಾಸವಲ್ಲದಿದ್ದರೆ ಪೂರ್ವಪದಕ್ಕೆ ಪನ್, ಪದಿ, ಎಂಬಯ್ ಮುಂತಾದ ಆದೇಶಗಳು ಬರುವುದೆಂತು ? ಪದಿನಾಲ್ಕು, ಇರ್ಪತ್ತು, ಈರಯ್ದು–ಮುಂತಾದವೂ ಈ ಸೂತ್ರಕ್ಕೆ ಉದಾಹರಣೆಗಳೇ. ಡಾ॥ ಬಿಳಿಗಿರಿಯವರು ನಿಷ್ಕಾರಣವಾಗಿ ಎತ್ತೆತ್ತಲೋ ಸುತ್ತಾಡಿದ್ದಾರೆ. ಅಲ್ಲದೆ ಕೇಶಿರಾಜನು ಉದಾಹರಿಸಿದ ಇರ್ಪತ್ತೈದು, ನೂಱುಪತ್ತು, ಮೂವತ್ತಾರು–ಈ ಶಬ್ದಗಳು ಸಮಾಸವಲ್ಲವೆಂಬುದಕ್ಕೆ ಯಾವ ಉಪಪತ್ತಿಯನ್ನೂ ತಿಳಿಸಿಲ್ಲ. ಏಕಪಕ್ಷೀಯವಾಗಿ ಇವು ಸಮಾಸವಲ್ಲವೆಂದು ತೀರ್ಪನ್ನಿತ್ತು ಹತ್ತುಸಾವಿರ, ಎಂಟುನೂರು – ಇವು ಸಮಾಸಗಳೇ ಎಂದು ಒಪ್ಪಿಕೊಂಡಿರುವುದು ತುಂಬ ವಿಚಿತ್ರವಾಗಿದೆ.

ಇರ್ಪತ್ತು ಎಂಬಲ್ಲಿ ಯಾವ ಸಮಾಸ ? ಎರಡು ಸಲ ಪತ್ತು ಇರ್ಪತ್ತು, ಎಂದು ವಿಗ್ರಹ. ಭಟ್ಟಾಕಳಂಕನ ಪ್ರಕಾರ ಇದು ಬಹುವ್ರೀಹಿ. ಸಂಸ್ಕೃತ ವ್ಯಾಕರಣಕ್ಕೆ ಇದು ಸಂಮತ. ಕೇಶಿರಾಜನು ಏನನ್ನೂ ಹೇಳಿಲ್ಲ. ಅವನ ಲಕ್ಷಣ ಅಪೂರ್ಣ.

ಸಂಖ್ಯಾಪೂರ್ವವಾದ್ದರಿಂದ ಗಮಕ ಸಮಾಸ ಎನ್ನಬೇಕು. ಆದರೆ ಕರ್ಮಧಾರಯದ ಲಕ್ಷಣ ಇದರಲ್ಲಿಲ್ಲ. 'ಏಕಾಶ್ರಯ'ವಾದರೆ ಎಂದರೆ ಅಭೇದಾನ್ವಯವಿದ್ದರೆ ಕರ್ಮಧಾರಯ. ಇರ್ಪತ್ತು ಎಂಬಲ್ಲಿ ಅಭೇದಾನ್ವಯವಿಲ್ಲ. ಅದಿರಲಿ. 'ಎತ್ತಾನುಂ ತತ್ಪುರುಷಮಪ್ಪುದು' ಎಂದು ಗ್ರಂಥಕಾರನು ಹೇಳುತ್ತಾನಲ್ಲ, ಅದಕ್ಕೆ ಉದಾಹರಣೆ ಯಾವುದು ? ವಿದ್ವಾಂಸರು ಇದನ್ನು ಪರೀಕ್ಷಿಸಿಲ್ಲವೆಂದು ಹೇಳಬೇಕಾಗಿದೆ. ಕರ್ಮಧಾರಯವಲ್ಲದ ತತ್ಪುರುಷ ಗಮಕ ಸಮಾಸದಲ್ಲಿ ಯಾವುದು ? ಸರ್ವನಾಮ, ಗುಣವಚನ, ಕೃದಂತಪೂರ್ವವಾದಾಗ ಕರ್ಮಧಾರಯವೇ ಆಗಿರುತ್ತದೆ. ಆದ್ದರಿಂದ ಸಂಖ್ಯಾಪೂರ್ವವಾದ ಇರ್ಪತ್ತೈದು, ಮೂವತ್ತಾರು–ಮೊದಲಾದವುಗಳಲ್ಲೇ ಇದನ್ನು ಕಂಡುಕೊಳ್ಳಬೇಕಾಗುತ್ತದೆ. ಇರ್ಪತ್ತು ಅಧಿಕವಾದ ಐದು ಇರ್ಪತ್ತೈದು ಎಂದು ವಿಗ್ರಹವನ್ನು ಹೇಳಬೇಕಾದ್ದರಿಂದ, ಇಲ್ಲಿ ಅಭೇದಾನ್ವಯವಿಲ್ಲವೆಂದೂ ಇದೇ ತತ್ಪುರುಷವೆಂದೂ ಕೇಶಿರಾಜನ ಅಭಿಪ್ರಾಯವಿರಬೇಕು.

೨. ಸರ್ವನಾಮಕ್ಕೆ—ಆವ ಮಾತು, ಆವ ಕಾರ್ಯಂ, ಆವ ನಾಯಕಂ, ಆವ ಕಾಂತೆ.

ಡಾ॥ ಬಿಳಿಗಿರಿಯವರು ಈ ಉದಾಹರಣೆಗಳನ್ನು ಪರಿಶೀಲಿಸಿಲ್ಲ. ತಮ್ಮ ಅನುಕೂಲಕ್ಕಾಗಿ ಕೈಬಿಟ್ಟಿರಬಹುದು. ಸಮಾಸದಲ್ಲಿ 'ಆವುದು' ಶಬ್ದದ 'ದು'ವಿಗೆ ಅಕಾರಾದೇಶ ಬಂದು ಹಿಂದಿನ ಉಕಾರಲೋಪವಾಗಿ 'ಆವ' ಆಗಿದೆಯೆಂದು ವ್ಯಾಕರಣದ ಪ್ರಕ್ರಿಯೆ. 'ದು' ಶಬ್ದಕ್ಕೆ ಲೋಪವೆನ್ನುವುದು ಇನ್ನೊಂದು ಪ್ರಕಾರ. ಲಿಂಗವಚನಗಳ ಭೇದವಿಲ್ಲದೆ ಈ ರೂಪವಾಗುತ್ತದೆ. ಉದಾ : ಆವ ಕಾರ್ಯಂ–ಆವ ಕಾರ್ಯಂಗಳ್, ಆವ ಪೆಣ್–ಆವ ಪೆಣ್ಗಳ್, ಆವ ಪುರುಷನ್–ಆವ ಪುರುಷರ್. ಸಮಾಸವಲ್ಲದಿದ್ದರೆ ಈ ರೂಪಗಳನ್ನು ಸಾಧಿಸುವುದು ಹೇಗೆ ? 'ಆವುದು' ಶಬ್ದಕ್ಕೆ ಆದೇಶ ಬಂದಿಲ್ಲವೆಂದೂ 'ಆವ' ಎಂಬ ಸ್ವತಂತ್ರಶಬ್ದವಿದೆಯೆಂದೂ ಹೇಳುತ್ತೀರೇನು? ಹಾಗಿದ್ದರೆ 'ಮರಂ' 'ಮರಂಗಳ್' ಎಂಬಂತೆ ನಪುಂಸಕದಲ್ಲಿ 'ಆವಂ' 'ಆವಂಗಳ್' ಎಂದೂ ಉಳಿದ ಬಹುವಚನದಲ್ಲಿ 'ಆವರ್' ಎಂದೂ ವಿಭಿನ್ನರೂಪಗಳು ಈ ಶಬ್ದಕ್ಕೆ ಪ್ರಾಪ್ತವಾಗುತ್ತವಲ್ಲ, ಇವನ್ನು ತಪ್ಪಿಸುವುದು ಹೇಗೆ ? ಅಷ್ಟೇ ಅಲ್ಲ. 'ಆವುದು' ಶಬ್ದಕ್ಕೇ ಸಮಾಸವಾದಾಗ 'ಆವುದು ಪುರುಷನ್' ಇತ್ಯಾದಿ ರೂಪಗಳು ಪ್ರಾಪ್ತವಾಗುತ್ತವೆ. ಸಮಾಸವನ್ನೊಪ್ಪದ ವಿದ್ವಾಂಸರು ಈ ಶಂಕೆಗಳಿಗೆ ಕೃಪೆಯಿಟ್ಟು ಸಮಾಧಾನ ಹೇಳಿದ್ದರೆ, ನಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತು. ಅನಿಷ್ಟರೂಪದ ವ್ಯಾವೃತ್ತಿಯೂ ಸಹ 'ಸಮಾಸ' ಸಂಜ್ಞೆಯ ಪ್ರಯೋಜನ.

ಅದುವಿದುವುದುಗಾಯೀಯೂ
ಪೊದವುಗುಮಾದೇಶಮಾಗಿ ಗಮಕದೊಳಾಯೆಂ
ಬುದು ಪೂರ್ವಪರಾಮರ್ಶಿಗ-
ಮೊದವುಗುಮಾರೂಢಿಗಂ ಕವೀಶ್ವರಮತದಿಂ ॥ ಸೂ. ೧೬೬ ॥

ಉದಾ—ಅದು ಮನೆ=ಆ ಮನೆ, ಈ ಮರ, ಊಪೆಣ್.

ಡಾ|| ಬಿಳಿಗಿರಿಯವರು ಇವು ಸಮಾಸಗಳಲ್ಲವೆನ್ನುತ್ತಾರೆ. ಅವರು

ಆ ಕರಿಯ ನೆಯ್ದಿಲ್
ಆ ನೆರೆದ ಗುರುಜನಂಗಳ್
ಈ ಅಸಿಯ ನೂಲ್

ಇತ್ಯಾದಿ ಪ್ರಯೋಗಗಳನ್ನುದಾಹರಿಸಿ, ಇಲ್ಲಿ ಸಮಾಸವನ್ನೊಪ್ಪಿದರೆ ಕರಿಯನೆಯ್ದಿಲ್ ಎಂಬುದು ಗಮಕಸಮಾಸವಾಗಿ ಅನಂತರ ಆ ಕರಿಯನೆಯ್ದಿಲ್ ಎಂಬುದೂ ಗಮಕ ಸಮಾಸವೆನ್ನಬೇಕಾಗುತ್ತದೆ ಎಂದಿದ್ದಾರೆ. ಇವುಗಳನ್ನೂ ಸಮಾಸವೇದರೆ ಸೂತ್ರಕ್ಕಾಗಿ ಆತ್ಮವನ್ನು ಮಾರಿಕೊಂಡಂತಾಗುತ್ತದೆಯೆಂದೂ ಇದು ಹಾಸ್ಯಾಸ್ಪದವೆಂದೂ ಹೇಳುತ್ತಾರೆ (ಪು. 86, 87).

ಆಲಂಕಾರಿಕವಾದ ಈ ಹೇಳಿಕೆ ಕೇಳಲು ಚೆನ್ನಾಗಿದೆ. ಇಷ್ಟು ಹೇಳಿ ಕೈತೊಳೆದುಕೊಳ್ಳಲಾಗುವುದಿಲ್ಲ. ಮೇಲ್ಕಂಡ ಪ್ರಯೋಗಗಳನ್ನು ನೀವು ಹೇಗೆ ಸಾಧಿಸುತ್ತೀರಿ ? ಸಮಾಸವಾಗದಿದ್ದರೂ ಆ, ಈ – ಆದೇಶಗಳು ಬರುತ್ತವೆಂದು ಹೇಳುತ್ತೀರೊ ? ಹಾಗಿದ್ದರೆ, ಕರಿಯ ನೆಯ್ದಿಲ್ ಆ, ನೆರೆದ ಗುರುಜನಂಗಳ್ ಈ – ಮುಂತಾದ ಪ್ರಯೋಗಗಳೇಕೆ ಬರುವುದಿಲ್ಲ ? ವಿಶೇಷ್ಯವು ಮುಂದೆ ಇದ್ದಾಗ ಮಾತ್ರ ಹಿಂದೆ ಇರುವ 'ಅದು ಇದು'ಗಳಿಗೆ ಆ, ಈ ಗಳು ಆದೇಶವಾಗಿ ಬರುತ್ತವೆಯೆಂದು ಸೂತ್ರವನ್ನು ರಚಿಸುತ್ತೀರೊ ? ಹಾಗೆ ಹೊಸನಿಯಮವನ್ನು ರಚಿಸುವುದಕ್ಕಿಂತ ಸಿದ್ಧವೇ ಆಗಿರುವ ಸಮಾಸವನ್ನೊಪ್ಪಿದರೆ ಬಾಧಕವೇನು ? ಹಾಸ್ಯಕ್ಕೆ ವಿಷಯವೇನಿದೆ ? ನಗು ಬರಲು ಕಾರಣವೇನು ? ಹಾಗಲ್ಲದೆ ಆ, ಈ – ಎಂಬ ಸ್ವತಂತ್ರವಾದ ಪ್ರತ್ಯೇಕ ಶಬ್ದಗಳಿವೆಯೆಂದು ಒಪ್ಪುವುದಾದರೆ ಸಮಾಸವಾಗದ ಇನ್ನೊಂದು ಪ್ರಯೋಗವನ್ನು ತೋರಿಸಬೇಕಾಗುತ್ತದೆ. ರಾಮನು ಯಾರು ?–ಎಂಬ ಪ್ರಶ್ನೆಗೆ 'ಅವನು' ಎಂದು ಉತ್ತರಿಸುವಂತೆ, 'ಆ' ಎಂದು ಉತ್ತರಿಸುವುದುಂಟೊ ? ಮತ್ತು ಈ ಪಕ್ಷದಲ್ಲಿ 'ಅದು' ಶಬ್ದಕ್ಕೆ 'ಪುರುಷ' ಶಬ್ದದೊಡನೆ ಸಮಾಸವಾದಾಗ 'ಅದು ಪುರುಷ' ಎಂಬ ರೂಪ ಪ್ರಾಪ್ತವಾಗುತ್ತದೆ. ಈ ಆವೃತ್ತಿಯನ್ನು ತಪ್ಪಿಸಲು ಸಾಧ್ಯವಿಲ್ಲ.

ಕೇಶಿರಾಜನ ಮೇಲ್ಕಂಡ ಸೂತ್ರದ ದ್ವಿತೀಯಾರ್ಧವನ್ನು ಸೂಕ್ಷ್ಮವಾಗಿ ಪರಿಕಿಸಿದರೆ ಇನ್ನೊಂದು ಅಭಿಪ್ರಾಯ ಹೊರಡುತ್ತದೆಯೆಂದು ನಮ್ಮ ಎಣಿಕೆ. ಆ, ಈ–ಎಂಬ ಆದೇಶಗಳೇ ಅಲ್ಲದೆ ಸ್ವತಂತ್ರವಾದ ಆ, ಈ ಶಬ್ದಗಳೂ ಇವೆಯೆಂದೂ ಸ್ಮರಣೆ, ಪ್ರಸಿದ್ಧಿ – ಇವೆರಡು ಅರ್ಥಗಳಲ್ಲಿ ಮಾತ್ರ ಇವಕ್ಕೆ ಪ್ರಯೋಗವೆಂದೂ ಆತನು ಹೇಳುವಂತೆ ಕಾಣುತ್ತದೆ. 'ಆ ನಿನ್ನ ಮಗ' ಮುಂತಾದವು ಪ್ರಾಮಾಣಿಕ ಪ್ರಯೋಗವಾದರೆ, ಸ್ಮರಣೆ ಅಥವಾ ಪ್ರಸಿದ್ಧಿಯ ಅರ್ಥದಲ್ಲಿ ಬಂದಿದೆಯೆಂದು ಹೇಳ

ಬೇಕಾಗುತ್ತದೆ. ಸ್ವತಂತ್ರ ಶಬ್ದಗಳೆಂದು ಒಪ್ಪಿದರೂ ಅದು ಇದುಗಳಿಗೆ ಸಮಾಸವನ್ನೂ ಆದೇಶವನ್ನೂ ಹೇಳುವುದು ಅನಿವಾರ್ಯ. ಹಾಗೆಯೇ ಎಲ್ಲದು ಧನಂ= ಎಲ್ಲ ಧನಂ, ಎಲ್ಲಾ ಧನಂ ಎಂಬ ರೂಪಗಳನ್ನು ಸಾಧಿಸುವುದಕ್ಕೆ ಇದು ಸಮಾಸವೆಂದು ಒಪ್ಪಬೇಕಾಗುತ್ತದೆ.

೩. ಕೃತ್ತಿಂಗೆ—

ಪಾಡುವ ತುಂಬಿ, ಕೋಡುವ ಪುಟಿಲ್, ಆಡಿದ ಪೊಲನ್, ಕಂಡ ವಿಚಾರಂ.

ಇವು ಸಮಾಸಗಳೆಂದು ಹೇಳುವ ಕೇಶಿರಾಜನ ಅಭಿಪ್ರಾಯ ಹೀಗೆ-ಪಾಡುವ, ಕೋಡುವ, ಆಡಿದ, ಕಂಡ – ಮೊದಲಾದವು ಕೃದಂತಗಳು. ಇವುಗಳಿಗೆ ವಿಭಕ್ತಿಪ್ರತ್ಯಯಗಳು ಸೇರಿ ಪಾಡುವನ್, ಪಾಡುವನಿಂ, ಪಾಡುವಂಗೆ, ಪಾಡುವರ– ಮುಂತಾದ ನಾಮಪದಗಳಾಗುತ್ತವೆ. ಅರ್ಥಾನುಸಾರವಾಗಿ ವಿಭಕ್ತಿಪ್ರತ್ಯಯಗಳು ಹತ್ತಲೇಬೇಕು. ಮೇಲ್ಕಂಡ ಶಬ್ದಗಳು ಸಮಾಸವಲ್ಲವಾದರೆ, ಪಾಡುವ ತುಂಬಿಗೆ, ಪಾಡುವ ತುಂಬಿಗಳಂ, ಪಾಡುವ ತುಂಬಿಗಳ – ಮೊದಲಾದ ಸ್ಥಳದಲ್ಲಿ ಕೃದಂತದ ಮುಂದೆ ವಿಭಕ್ತಿಪ್ರತ್ಯಯವೇಕೆ ಬಂದಿಲ್ಲ—ಎಂಬ ಪ್ರಶ್ನೆ ಹುಟ್ಟುತ್ತದೆ.

ವಿದಿತ ವಿಶೇಷಣಪದಮವು
ಮೊದಲ ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ ।
ಪದವೆತ್ತುವಗ್ರಕಾರಕ
ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್ ॥ ಸೂ. ೧೪೦ ॥

ಪ್ರಯೋಗಂ–ವೀರನುದಾರಂ ಶುಚಿಗಂ-
ಭೀರಂ ನಯಶಾಲಿ ಕೈದುವೊತ್ತರದೇವಂ- ।
ಗಾರೆಣೆಗನ್ನೃಪತುಂಗಂಗೆ...॥

ವಿಶೇಷ್ಯದ ಮೇಲೆ ಯಾವ ವಿಭಕ್ತಿಯಿದ್ದರೂ ವಿಶೇಷಣದ ಮೇಲೆ ಪ್ರಥಮಾ ವಿಭಕ್ತಿ ಬರಬಹುದೆಂದು ವಿಶೇಷವಿಧಿ ಇದು. ಇದು ವಿಕಲ್ಪವಾದ್ದರಿಂದ-

'ವೀರಂಗೆ ಉದಾರಂಗೆ ಶುಚಿಗಂಭೀರಂಗೆ ನೃಪತುಂಗಂಗೆ' ಎಂದು ವಿಶೇಷ್ಯದ ಚತುರ್ಥಿಯೂ ಬರಬಹುದು. ಅಂತೂ ವಿಶೇಷಣದ ಮೇಲೆ ವಿಭಕ್ತಿ ಬರಲೇಬೇಕು, ಆದ್ದರಿಂದ ಪಾಡುವ ತುಂಬಿ, ಪಾಡುವಂಗನೆಗೆ, ಪಾಡುವ ಪುರುಷರ–ಮೊದಲಾದ ಸ್ಥಳದಲ್ಲಿ ವಿಶೇಷಣದ ವಿಭಕ್ತಿಗೆ ಲೋಪವನ್ನು ಸಾಧಿಸಲು ಸಮಾಸವನ್ನೊಪ್ಪಬೇಕು– ಎಂದು.

ವಿಚಾರ—ಪಾಡುವ, ತೀಡುವ, ಬೇಡುವ, ಕಾಣುವ ಮೊದಲಾದವು ವರ್ತಮಾನ ಕ್ರಿಯಾಬೋಧಕಗಳು. ಪಾಡಿದ, ತೀಡಿದ, ಬೇಡಿದ, ಕಂಡ

ಮೊದಲಾದವು ಭೂತಕ್ರಿಯಾಬೋಧಕಗಳು. ಇವು ಯಾವಾಗಲೂ ವಿಶೇಷಣಗಳೇ. ಈ ಕೃಂತಗಳಿಗೆ ವಿಶೇಷ್ಯದೊಡನೆ ಸಮಾಸ ಮಾಡಿದಾಗ ನಡುವೆ ಇನ್ನೊಂದು ಶಬ್ದದ ಪ್ರವೇಶಕ್ಕೆ ಅವಕಾಶವಿರಬಾರದು. ಆದರೆ ಈ ಪ್ರಯೋಗಗಳನ್ನು ನೋಡಿ—

೧. ತೀವಿದ ಕಮ್ಮನಪ್ಪ ತುಪ್ಪದ ಕೊಡದೊಳ್

೨. ಮೆಟ್ಟಿದ ಕಾಲೊಳ್ ಪಾವುಗೆ
ಕಟ್ಟಿದ ಕೊರಳಲ್ಲಿ ಮುತ್ತಿನೆಕ್ಕಾವಳಿ ತ- ।
ನ್ನಿಟ್ಟ ನೊಸಲಲ್ಲಿ ಕತ್ತುರಿ
ಬೊಟ್ಟು ಕರಂ ಸೊಬಗುವಡೆದುದಾ ನೃಪಸುತನಾ ॥

೩. ಮಾಡುವ ನಿನ್ನೊಳಿಗಮಂ
ಪಾಡುವ ನಿನ್ನೊಳ್ಗುಣಂಗಳಂ ಸಂತಸದಿಂ- ।
ದಾಡುವ ನಿನ್ನೊಡನಮರರ
ಗಾಡಿಯೆ ಪೇಳ್ದಪ್ಪುದು ನಿನ್ನ ಪೆಂಪಂ ಜಿನಪಾ ॥

ಇಂತಹ ನೂರಾರು ಪ್ರಯೋಗಗಳನ್ನು ತೋರಿಸಬಹುದು. ಇಲ್ಲಿ ವಿಶೇಷಣ ವಿಶೇಷ್ಯಗಳ ನಡುವೆ ಇತರ ಶಬ್ದಗಳು ಸೇರಿವೆ. ಆದ್ದರಿಂದ ಇವನ್ನು ಸಮಾಸವೆನ್ನುವುದು ಹೇಗೆ? ಅಲ್ಲದೆ ಈ ಕೃದಂತಗಳು ವಿಶೇಷ್ಯದ ಹಿಂದೆ ಇರಬೇಕೆಂಬ ನಿಯಮವನ್ನೂ ಮಾಡಲಾಗುವುದಿಲ್ಲ. ವಿಶೇಷ್ಯದ ಮುಂದೆಯೂ ಇರಬಹುದು. ಜಗನ್ನಾಥವಿಜಯದ ಈ ಪದ್ಯವನ್ನು ನೋಡಿ—

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್‌ಪುಷ್ಪಾಂಜಲಿಕ್ಷೇಪವ-
ಕ್ಷೋರಂಗಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ ।
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ ॥

ಈ ಪದ್ಯದಲ್ಲಿ 'ಆದ ಶ್ರೀರಾಮಾನಟಿ, ಸಂದ ಪಾದನಖರೋಚಿರ್ಗಂಗೆ, ಗೆಲ್ದ ಚಕ್ರರವಿ' ಎಂಬುದಾಗಿ ಅನ್ವಯವಷ್ಟೆ. ಪದ್ಯದಲ್ಲಿ ವಿಶೇಷ್ಯಗಳು ಮೊದಲಿದ್ದು ವಿಶೇಷಣಗಳು ಅನಂತರ ಬಂದಿವೆ. ಹೀಗಿರುವಾಗ ಸಮಾಸವಾಗಿದೆಯೆಂಬ ಶಂಕೆಗೆ ಸಹ ಅವಕಾಶವಿಲ್ಲ. ಇವುಗಳ ಉಪಪತ್ತಿ ಹೇಗೆ? ಈ ವಿಷಯದಲ್ಲಿ ಕೇಶಿರಾಜನು ಮೌನವನ್ನವಲಂಬಿಸಿದ್ದಾನೆ. ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ 'ಅಗ್‌ಬಹುಲಂ' (ಸೂ. ೩೪೫) ಎಂದು ಸೂತ್ರಿಸಿ ಬಹುಲಗ್ರಹಣದಿಂದ ಇವೆಲ್ಲವನ್ನೂ ಸೂಚಿಸಿದ್ದಾನೆ. ವಿಧಿಸೂತ್ರದ ಪ್ರಾಪ್ತಿ, ನಿವೃತ್ತಿ, ವಿಕಲ್ಪ ಅಥವಾ ಇನ್ನಾವುದೋ ವಿಧಿಸೂತ್ರದ

ಪ್ರಾಪ್ತಿ–ಇವುಗಳನ್ನು ವೈಯಾಕರಣರು 'ಬಹುಲ' ಶಬ್ದದಿಂದ ಸಾಧಿಸುತ್ತಾರೆ. 'ಕ್ವಚಿತ್ ಪ್ರವೃತ್ತಿಃ ಕ್ವಚಿದಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯದೇವ' ಎಂದು ಪ್ರಾಚೀನರ ವಚನವಿದೆ. ಕುತೂಹಲವುಳ್ಳವರು ಶಬ್ದಾನುಶಾಸನದ ಸೂ. ೩೪೫ ಮತ್ತು ೯೭ರ ಸಂಸ್ಕೃತ ವ್ಯಾಖ್ಯಾನವನ್ನೂ ಶ್ರೀ ಕುಂಡಲಗಿರ್ಯಾಚಾರ್ಯರ ಕನ್ನಡ ವ್ಯಾಖ್ಯಾನವನ್ನೂ (ಶಿ. ಶಿ. ಬಸವನಾಳರಿಂದ ಸಂಪಾದಿತ) ನೋಡಬಹುದು. ತಾತ್ಪರ್ಯವಿಷ್ಟು—

೧. ಯಾವುದೇ ಒಂದು ಪದವು ಪರವಾದಾಗಲೂ ಧಾತುಗಳಿಗೆ ಪಾಡುವ, ತೂಗುವ, ಕಂಡ, ಆದ–ಮುಂತಾದ ಕೃದಂತರೂಪಗಳಾಗಬಹುದು. ಸಮಾಸವಾಗಬೇಕೆಂಬ ನಿಯಮವೇನೂ ಇಲ್ಲ.

೨. ಕರ್ಮಧಾರಯವು ವಿಕಲ್ಪವಾದ್ದರಿಂದ ಸಮಾಸ ಬರದಾಗ ಈ ಎರಡು ಶಬ್ದಗಳ ನಡುವೆ ಹೊರತಾದ ಇನ್ನೊಂದು ಶಬ್ದದ ಪ್ರವೇಶವಾಗಲು ಅಡ್ಡಿಯೇನೂ ಇಲ್ಲ.

೩. ಸಮಾಸ ಬರದೆ ಇದ್ದಾಗ ಮೇಲ್ಕಂಡ ಕೃದಂತಗಳು ಅವ್ಯಯಗಳಾಗುತ್ತವೆ. ಆದ್ದರಿಂದ ವ್ಯಸ್ತದಲ್ಲಿ ನಾಮಪ್ರತ್ಯಯದ ಶ್ರವಣವಿಲ್ಲ. ಈ ಅವ್ಯಯ ಸಂಜ್ಞೆ ವಿಕಲ್ಪವಾದ್ದರಿಂದ ಪಾಡುವನಿಂ, ಪಾಡುವಂಗೆ—ಮುಂತಾದ ರೂಪಗಳೂ ಆಗಬಹುದು.

ಹಾಗಾದರೆ ಪಾಡುವ ತುಂಬಿ ಮುಂತಾದ ಗಮಕಸಮಾಸೋದಾಹರಣೆಗಳಲ್ಲಿ (ಕೃದಂತಪೂರ್ವವಾದಾಗ) ಸಮಾಸವಾಗಿದೆಯೆಂದು ಹೇಳುವುದೇಕೆ, ಪಾಡುವ ಮೊದಲಾದವು ಅವ್ಯಯಗಳಾದ್ದರಿಂದ ನಾಮಪ್ರತ್ಯಯದ ಶ್ರವಣವಿಲ್ಲ—ಎಂಬ ಶಂಕೆ ಗಟ್ಟಿಯಾಗಿ ಉಳಿಯುತ್ತದೆ. ಇದಕ್ಕೆ ಸಮಾಧಾನವಿಷ್ಟೆ: ವಿಶೇಷಣ ವಿಶೇಷ್ಯಭಾವ ಇರುವುದರಿಂದ ಇಲ್ಲಿ ಕರ್ಮಧಾರಯ ಸಮಾಸ ಬರಲು ಅಡ್ಡಿಯೇನೂ ಇಲ್ಲ. ಎತ್ತುಂಗೋಲ್, ಚುರ್ಚುಂಗೊಳ್ಳಿ ಮೊದಲಾದ ಕಡೆ ಕೃದುತಗಳಿಗೆ ಸಮಾಸ ಬರುತ್ತಿರುವಾಗ 'ಪಾಡುವ ತುಂಬಿ' ಎಂಬಲ್ಲಿ ಸಮಾಸವನ್ನು ತಡೆಯುವುದು ಹೇಗೆ? ವಿಕಲ್ಪವಾದ್ದರಿಂದ ಸಮಾಸ ಬಂದಿಲ್ಲ ಎಂಬುದು ಬೇರೆ ಮಾತು. ಸಮಾಸವಾದ್ದಕ್ಕೆ ನಿರ್ದಿಷ್ಟ ಪ್ರಯೋಜನವಿಲ್ಲವೆಂಬುದೇನೋ ದಿಟ. ಸಮಾಸವಾದರೂ ಆಗದಿದ್ದರೂ ರೂಪ ಒಂದೇ ಎನ್ನಲಡ್ಡಿಯಿಲ್ಲ. ನೀಲಾಭ್ರಶ್ರೇಣಿಃ ಎಂಬ ಶಬ್ದವನ್ನು ಪರೀಕ್ಷಿಸಬಹುದು. ನೀಲಾ + ಅಭ್ರಶ್ರೇಣಿಃ ಎಂದು ಪದಚ್ಛೇದ. ಇದು ಕರ್ಮಧಾರಯವಾಗಿ ಸಮಸ್ತವಾಗಿದೆಯೊ? ವ್ಯಸ್ತವೊ? ಎರಡೂ ಸಾಧ್ಯ.

ಏವಂಚ ಕೃದಂತಪೂರ್ವಕ ಗಮಕಸಮಾಸಕ್ಕೆ ಕೇಶಿರಾಜನು ಕೊಟ್ಟಿರುವ ಉದಾಹರಣೆ ಗಟ್ಟಿಯಾದ್ದಲ್ಲ. ಇಷ್ಟು ಮಾತ್ರದಿಂದ ಉಳಿದ ಸಂಖ್ಯಾಗುಣವಚನ

ಸರ್ವನಾಮಪೂರ್ವಕವಾದ ಉದಾಹರಣೆಗಳಲ್ಲಿಯೂ ಸಮಾಸವಾಗಿಲ್ಲ ಎಂಬುದು ಸಾಹಸದ ಮಾತು. ಒಟ್ಟಿನಲ್ಲಿ ನಿರ್ಗಳಿತವಾದ ಅರ್ಥ ಹೀಗೆ—

೧. ಗಮಕ ಸಮಾಸವು ಸಮಾಸವೇ ಹೌದು.

೨. ಇದು ಉಳಿದ ಸಮಾಸಗಳಲ್ಲಿ ಅಂತರ್ಗತವಾಗುತ್ತದೆ. ಪ್ರತ್ಯೇಕವಾಗಿ ಇದಕ್ಕೆ ಅಸ್ತಿತ್ವವಿಲ್ಲ.

೩. ಇವರಲ್ಲಿ ಅರಿಸಮಾಸ ದೋಷವಿಲ್ಲವೆಂಬುದೊಂದೇ ವೈಶಿಷ್ಟ್ಯ.

ಗಮಕ ಸಮಾಸವು ಪ್ರತ್ಯೇಕವಾದ ಸಮಾಸವಾಗದೆ ಇತರ ಸಮಾಸಗಳಲ್ಲಿ ಅಂತರ್ಗತವಾಗುವುದರಿಂದಲೇ ನಾಗವರ್ಮನಾಗಲಿ ಭಟ್ಟಾಕಳಂಕನಾಗಲಿ ಇದನ್ನು ಹೆಸರಿಸಿಲ್ಲ. ಕೇಶಿರಾಜನ ಗಮಕಸಮಾಸದ ಸೂತ್ರಕ್ಕೆ ಸಂವಾದಿಯಾದ ಭಟ್ಟಾಕಲಂಕನ ಸೂತ್ರವನ್ನು ನಾವು ಹಿಂದೆ ತೋರಿಸಿದ್ದೇವೆ. ಆ ಸೂತ್ರದಲ್ಲಿ 'ಸಂಸ್ಕೃತೇನ ಚ' ಎಂದು ಹೇಳಿ ಅರಿಸಮಾಸವಾಗುವುದೆಂದು ಭಟ್ಟಾಕಲಂಕನೂ ಒಪ್ಪಿಕೊಂಡಿದ್ದಾನೆ. 'ಗಮಕಸಮಾಸದಿಂ...ಅರಿದಲ್ತೆ ಕನ್ನಡಂ' ಎನ್ನುವ ಕೇಶಿರಾಜನಿಗೆ ಈ ಒಂದು ವೈಶಿಷ್ಟ್ಯವು ಕಣ್ಣೆದುರಿಗಿರಬಹುದೇ ಹೊರತು ಬೇರೆ ಏನೂ ಇಲ್ಲವೆಂದೇ ಹೇಳಬೇಕಾಗಿದೆ. ಈತನ ಗಮಕ ಸಮಾಸದ ಲಕ್ಷಣವೇ ಅವ್ಯವಸ್ಥಿತ.

ಪ್ರಾಸಂಗಿಕವಾಗಿ ಡಾ॥ ಬಿಳಿಗಿರಿಯವರ ಕೆಲವು ಹೇಳಿಕೆಗಳನ್ನಿಲ್ಲಿ ಪರಿಶೀಲಿಸಬೇಕಾಗಿದೆ. ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಯಾವುದೋ ಅಭಿಪ್ರಾಯವನ್ನಿಟ್ಟುಕೊಂಡು ಮಾತುಗಳನ್ನವರು ಹೆಣೆಯುತ್ತಾರೆ, ನಮಗೆ ಅರ್ಥವಾಗುವುದಿಲ್ಲ. ವ್ಯಾಕರಣ ಶಾಸ್ತ್ರದಲ್ಲಿ ಮಾತಾಡುವಾಗ ವ್ಯಾಕರಣದ ಪರಿಭಾಷೆಯನ್ನು ಬಳಸಿದರೆ ಅರ್ಥವಾದೀತು. ಋಣಾತ್ಮಕವಾದ ಉಪಾಯ, ಧನಾತ್ಮಕವಾದ ತತ್ತ್ವ—ಇತ್ಯಾದಿ ಶಬ್ದಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. "ಸೀತೆ ಗಾಜಿನ ಬಳೆ ಒಡೆದುಹಾಕಿದಳು—ಎಂಬ ವಾಕ್ಯದಲ್ಲಿ 'ಸೀತೆ ಗಾಜಿನ' ಎಂಬುದು ಈ ವಾಕ್ಯದ ಅಂಗವೇ ಅಲ್ಲ" ಎಂದು ಬರೆದಿದ್ದಾರೆ (ಪು. 75). ವ್ಯಾಕರಣಶಾಸ್ತ್ರದ ಪ್ರಕಾರ ಎಲ್ಲ ಶಬ್ದಗಳೂ ಆಯಾ ವಾಕ್ಯದ ಅಂಗಗಳೇ. 'ಸೀತೆ ಗಾಜಿನ' ಎಂಬುದು 'ನಾನು ಮಲಗಿದೆ' ಎಂಬ ವಾಕ್ಯದ ಅಂಗವಾದೀತೇನು ?

"ಪ್ರಕೃತಿಗಳ ಆನುಪೂರ್ವಿ ಕೇವಲ ಆನುಪೂರ್ವಿಯೋ ಅಥವಾ ಸಮಾಸವೋ ಎಂದು ತಿಳಿದುಕೊಳ್ಳಲು ವರ್ಣನಾತ್ಮಕ ಭಾಷಾವಿಜ್ಞಾನಿಗಳು ಕೆಲವು ಉಪಾಯಗಳನ್ನು ಅಥವಾ ತತ್ತ್ವಗಳನ್ನು" ಬಳಸುತ್ತಾರಂತೆ (ಪು. 75, 76). ಈ ದೃಷ್ಟಿಯೇ ವ್ಯಾಕರಣಶಾಸ್ತ್ರಕ್ಕೆ ಸಂಮತವಲ್ಲ. ಭೂಮಿಯಲ್ಲಿ ಕಬ್ಬಿಣವೋ ತಾಮ್ರವೋ ಹುದುಗಿಕೊಂಡಿರುವಂತೆ ಸಮಾಸ ಎಂಬ ಒಂದು ವಸ್ತು ಭಾಷೆಯಲ್ಲಿ ಹುದುಗಿ

ಕೊಂಡಿರುವುದಿಲ್ಲ. ಸಮಾಸ ಎಂಬುದು ಒಂದಾನೊಂದು ಸಂಜ್ಞೆಯೆಂದು ಹಿಂದೆ ಹೇಳಿದ್ದಾಗಿದೆ. ವ್ಯಾಕರಣಶಾಸ್ತ್ರವು ಇದು ಸಮಾಸವೆಂದರೆ ಸಮಾಸ, ಅಲ್ಲವೆಂದರೆ ಅಲ್ಲ. ಈ ಸಂಜ್ಞೆಯನ್ನಿಟ್ಟದ್ದಕ್ಕೆ ಪ್ರಯೋಜನವೇನೆಂದು ಮಾತ್ರ ಯಾರು ಬೇಕಾದರೂ ಪರೀಕ್ಷಿಸಬಹುದು.

'ದೇವದತ್ತಸ್ಯ ಗುರುಕುಲಂ' ಮುಂತಾದ ಕಡೆ ಏಕದೇಶಾನ್ವಯವಿದ್ದರೂ ಸಮಾಸ ಬಂದಿರುತ್ತದೆ. ಇಂತಹ ಕಡೆ ಮಹಾಕವಿಪ್ರಯೋಗದಿಂದ ಸಾಧುವೆಂದು ಮನ್ನಿಸಿಬಿಡುತ್ತಾರೆಂದೂ ಈ ಮನ್ನಿಸುವಿಕೆಯಿಂದ ಇಂಥ ಸಮಾಸಗಳಿಗೆ ಸಾಧುತ್ವ ಬಂದೊದಗುವುದಿಲ್ಲವೆಂದೂ ಹೇಳಿದ್ದಾರೆ (ಪು. 77). ಇದು ಭ್ರಮೆಯಿಂದಾದ ಹೇಳಿಕೆ. 'ಸಾಪೇಕ್ಷತ್ವೇಽಪಿ ಗಮಕತ್ವಾತ್ ಸಮಾಸಃ' ಎಂದು ವೈಯಾಕರಣರು ಹೇಳುವುದುಂಟು. ಇಂತಹ ಸ್ಥಳದಲ್ಲಿ ಸಮಾಸ ಬರುತ್ತದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದು ಸಾಧುವೇ. ಮಹಾಕವಿಪ್ರಯೋಗದಿಂದ ಇದಕ್ಕೆ ಸಾಧುತ್ವವನ್ನು ಹೇಳಿಲ್ಲ. ವೈಯಾಕರಣರೇ ಇಂತಹ ಸಂದರ್ಭಗಳಲ್ಲಿಯೂ ಸಮಾಸ ಬರುತ್ತದೆಯೆಂದು ಘೋಷಿಸುತ್ತಿರುವಾಗ ಸಮಾಸ ಬರುವುದಿಲ್ಲವೆಂದು ಹೇಳುವುದಕ್ಕೆ ನಾವು ಯಾರು ? ಇಂತಹ ಪ್ರಯೋಗ ಎಲ್ಲ ಭಾಷೆಗಳಲ್ಲೂ ಉಂಟು. ಏಕದೇಶಾನ್ವಯವಿರುವ ಸಮಾಸ ಕನ್ನಡದಲ್ಲಿಲ್ಲ ಎಂದಿರುವುದೂ ಸರಿಯಲ್ಲ. ಈ ಉದಾಹರಣೆಗಳನ್ನು ನೋಡಿ: ಅರಸಿನ ಮನೆ=ಅರಮನೆ. 'ಇದು ಪುಲಿಕೇಶಿಯ ಅರಮನೆ'. ಪುಲಿಕೇಶಿಯೆಂಬ ಅರಸಿನ ಮನೆಯೆಂದರ್ಥ. ಇಲ್ಲಿ ಏಕದೇಶಾನ್ವಯ ಇಲ್ಲವೆ ? ಇದು ಅಸಾಧುಪ್ರಯೋಗವೆಂದು ಡಾ॥ ಬಿಳಿಗಿರಿಯವರು ಹೇಳುತ್ತಾರೇನು ? ತಲೆನೋವು, ಕಾಲುಬಳೆ—ಇವು ಸಮಾಸಗಳೆಂದು ಲೇಖಕರೇ ಒಪ್ಪಿಕೊಂಡಿದ್ದಾರೆ. ನನ್ನ ತಲೆನೋವು ವಾಸಿಯಾಯಿತು. ಇದು ಆ ಹುಡುಗಿಯ ಕಾಲುಬಳೆ—ಇಲ್ಲಿ ಏಕದೇಶಾನ್ವಯವಿಲ್ಲವೆ ? "ಅವನಿಗೆ ಹರ್ಷದಾಯಕವಾದ, ಇವಳಿಗೆ ದುಃಖಜನಕವಾದ" ಎಂಬ ಪ್ರಯೋಗಗಳಲ್ಲಿಯೂ ಏಕದೇಶಾನ್ವಯ ಇದ್ದೇ ಇದೆ. ಇವೆಲ್ಲ ಅಸಾಧುಪ್ರಯೋಗಗಳೇನು ?

"ಹಣೆಗಣ್ಣ ಎಂಬುದು ಸಮಾಸವಲ್ಲ. ಹಣೆಗಣ್ಣು ಎಂಬ ಸಮಾಸಕ್ಕೆ ಅಪ್ರತ್ಯಯ ಹತ್ತಿ ಆಗಿರುವ ತದ್ಧಿತರೂಪ" ಎಂದಿದ್ದಾರೆ (ಪು. 78). ನಿಜ. ಹಾಗೆ ರೂಪಸಿದ್ಧಿಯನ್ನು ಹೇಳಲೂ ಸಾಧ್ಯ. ಆದರೆ ಆಪಕ್ಷದಲ್ಲಿ ಸಮಾಸ ಮತ್ತು ತದ್ಧಿತವೆಂದು ಎರಡು ವೃತ್ತಿಗಳನ್ನು ಆಶ್ರಯಿಸಬೇಕಾಗುತ್ತದೆ. ವೈಯಾಕರಣರಾದರೋ ಬಹುವ್ರೀಹಿ ಸಮಾಸವೆಂಬ ಒಂದೇ ವೃತ್ತಿಯಿಂದ ಈ ಬಗೆಯ ರೂಪಗಳನ್ನು ಸಾಧಿಸುತ್ತಾರೆ. ಈ ಪಕ್ಷದಲ್ಲಿ ಲಾಘವ ಉಂಟು. ನಿಡಿಮೂಗ, ಮುಕ್ಕಣ್ಣ, ನಿಡುದಲೆಯ, ಬಟ್ಟದೊಡೆಯಳ್—ಮೊದಲಾದ ಬಹುವ್ರೀಹಿಗಳಲ್ಲಿ ಸಮಾಸಾಂತವಾಗಿ 'ಅ'ಪ್ರತ್ಯಯ ಕಂಡುಬರುತ್ತದೆ. ಇದು ಮತ್ವರ್ಥೀಯ 'ಅ' ಎಂಬ ತದ್ಧಿತವಾದರೆ, ಸಮಾಸದ ಮೇಲೆ ಮಾತ್ರ ಇಂತಹ ತದ್ಧಿತ ಬರುತ್ತದೆಯೆಂದು ನಿಯಮ

ಮಾಡಬೇಕಾದೀತು. ಇಲ್ಲದಿದ್ದರೆ ತಲೆಯುಳ್ಳವನು ತಲೆಯು, ಕಣ್ಣುಳ್ಳವನು ಕಣ್ಣ–ಎಂಬ ರೂಪಗಳನ್ನು ಒಪ್ಪಬೇಕಾಗುತ್ತದೆ. ವಸ್ತುತಃ ಅಂತಹ 'ಅ' ಎಂಬ ಮತ್ವರ್ಥೀಯಪ್ರತ್ಯಯ ಕನ್ನಡದಲ್ಲಿಲ್ಲ. ಕೇಶಿರಾಜನಾಗಲಿ ಭಟ್ಟಾಕಳಂಕನಾಗಲಿ ಅದನ್ನು ಹೇಳಿಯೇ ಇಲ್ಲ. ಕಿವುಡ, ಕುರುಡ, ಕುಳ್ಳ ಮೊದಲಾದವು ಸ್ವತಃಸಿದ್ಧ ಶಬ್ದಗಳು. ಈ ಶಬ್ದಗಳ ಮೇಲೆ ಭಾವಾರ್ಥದಲ್ಲಿ 'ಉ' ಪ್ರತ್ಯಯ ಬಂದು ಕಿವುಡು, ಕುರುಡು, ಕುಳ್ಳು–ಮೊದಲಾದವು ಸಿದ್ಧವಾಗಿವೆ. ಕಿವುಡ ಶಬ್ದದಿಂದ ಕಿವುಡು ಹುಟ್ಟಿದೆ. ಹಾಗೆಯೇ ಕುರುಡ, ಕುಳ್ಳ ಮೊದಲಾದವು.

ಗಮಕಸಮಾಸವನ್ನೊಪ್ಪದಿದ್ದರೆ 'ಪಾಡುವ, ಆಡಿದ, ಬಿಳಿಯ, ನಿಡಿಯ, ಆ, ಈ, ಆವ' ಮುಂತಾದ ಶಬ್ದಗಳಿಗೆ ಪದತ್ವಸಿದ್ಧಿ ಹೇಗೆ ?–ಎಂಬ ಪ್ರಶ್ನೆ ಡಾ॥ ಬಿಳಿಗಿರಿಯವರನ್ನು ಕಾಡಿಸುತ್ತದೆ. ಆದರೆ 'ಬಿಳಿಯ, ನಿಡಿಯ, ಆ, ಈ, ಆವ' ಎಂಬ ರೂಪಗಳ ಸಿದ್ಧಿ ಹೇಗೆ–ಎಂಬ ಪ್ರಶ್ನೆ ಅವರನ್ನು ಕಾಡಿಸುವುದೇ ಇಲ್ಲ ! ಇವುಗಳಿಗೆ ಪದತ್ವವಿಲ್ಲದೆ ಹೋದರೆ ಭಾಷಾಶಾಸ್ತ್ರದವರಿಗೆ ಬರುವ ವಿಪತ್ತು ಏನು ಎಂದು ನಮ್ಮ ಪ್ರಶ್ನೆ! ತಮ್ಮ ಪ್ರಶ್ನೆಗೆ ಉತ್ತರವಾಗಿ " 'ಮಾಡುತೆ, ಮಾಡಿ, ಮಾಡಿದೊಡೆ, ಮಾಡಲ್' ಮುಂತಾದ 'ಅಪೂರ್ಣ' ರೂಪಗಳಿಗೆ ಹೇಗೆ ಪದತ್ವ ಸಿದ್ಧಿಸುತ್ತದೆಯೋ ಹಾಗೆಯೇ" ಎಂದು ಹೇಳಿದ್ದಾರೆ (ಪು. 90). ವ್ಯಾಕರಣಶಾಸ್ತ್ರದ ಪ್ರಕಾರ ಈ ಕೃದಂತಾವ್ಯಯಗಳಿಗೆ ವಿಭಕ್ತಿಪ್ರತ್ಯಯ ಬಂದು ಲೋಪವಾಗಿದೆಯಾದ್ದರಿಂದ ಇವು ಪದಗಳು. ಡಾ॥ ಬಿಳಿಗಿರಿಯವರು ಈ ವ್ಯಾಕರಣಪ್ರಕ್ರಿಯೆಯನ್ನು ಹಂಗಿಸುತ್ತ ಈ ವೈಯಾಕರಣರು "ತಮ್ಮ ಶಾಸ್ತ್ರನಿಷ್ಠೆಗೆ ತಾವೇ ಬೆನ್ನುತಟ್ಟಿಕೊಳ್ಳುವ ಚತುರರು" ಎಂದಿದ್ದಾರೆ. ತಾವು ಹೇಳುವ ಪರಿಹಾರವೇನೆಂದರೆ–"ಎಲ್ಲೆಲ್ಲಿ 'ಪದ' ಎಂಬುದಕ್ಕೆ ಸಾಧಾರಣ ಲಕ್ಷಣವನ್ನು ಕೊಡಲು ಸಾಧ್ಯವೋ ಅಲ್ಲೆಲ್ಲಾ ಕೊಟ್ಟು, ಆ ಲಕ್ಷಣಗಳಿಲ್ಲದ ಆದರೆ 'ಪದ'ವೆಂದು ಕರೆದದ್ದರಿಂದ ವ್ಯಾಕರಣಕ್ಕೆ ಲಾಘವವನ್ನು ತಂದುಕೊಡುವ ರೂಪಗಳನ್ನೂ ಪದಗಳೆಂದು ಕರೆದು ಬಿಡುವುದು !" (ಪು. 90).

ವ್ಯಾಕರಣಶಾಸ್ತ್ರವು ಇಷ್ಟು ಹಗುರವಾಗಿದ್ದರೆ ಆನಂದವರ್ಧನನು ವೈಯಾಕರಣರನ್ನು 'ಪ್ರಥಮೇ ವಿದ್ವಾಂಸಃ' ಎಂದು ಹೊಗಳುತ್ತಿರಲಿಲ್ಲ. "ವಿಭಕ್ತ್ಯಂತವಾದದ್ದು ಪದ. ಪದವನ್ನು ಮಾತ್ರ ಪ್ರಯೋಗಿಸಬೇಕು. ಕೇವಲ ಪ್ರಕೃತಿಯನ್ನಾಗಲಿ ಕೇವಲ ಪ್ರತ್ಯಯವನ್ನಾಗಲಿ ಪ್ರಯೋಗಿಸಬಾರದು" ಎಂದು ವ್ಯಾಕರಣಶಾಸ್ತ್ರದ ಸಿದ್ಧಾಂತ. ಈ ಸಿದ್ಧಾಂತದ ಬುಡಕ್ಕೇ ಕೊಡಲಿಯನ್ನು ಹಾಕುತ್ತಿದ್ದಾರೇನು? ಇದಕ್ಕೆ ಉತ್ತರ ಹೇಳುವುದು ಬಹಳ ವಿಸ್ತರವಾದೀತು. ಅತಿಸಂಕ್ಷೇಪವಾಗಿ ನಾಲ್ಕು ಮಾತುಗಳನ್ನಿಲ್ಲಿ ಬರೆಯಬಹುದು.

ಅವ್ಯಯಗಳು ಲಿಂಗ (ಪ್ರಾತಿಪದಿಕ) ಗಳಾದ್ದರಿಂದ ಅವುಗಳ ಮೇಲೆ ವಿಭಕ್ತಿಪ್ರತ್ಯಯವೇಕೆ ಹುಟ್ಟುವುದಿಲ್ಲವೆಂಬುದಕ್ಕೆ ಭಾಷಾಶಾಸ್ತ್ರದವರು ಸರಿಯಾದ ಕಾರಣವನ್ನು ಹೇಳಬೇಕು. ಅಲ್ಲಂ, ಇಲ್ಲಂ, ಬಱಿಕೆ, ಬಱಿಯಂ, ವಲಂ–ಮುಂತಾದ

ಅವ್ಯಯಗಳ ಮೇಲೆ ಪ್ರತ್ಯಯ ಹುಟ್ಟಿರುವುದನ್ನು ಕಾಣಬಹುದು. ಆದ್ದರಿಂದ ಪ್ರತ್ಯಯ ಹುಟ್ಟುತ್ತದೆಯೆಂದೂ ಬಹಳ ಸ್ಥಳಗಳಲ್ಲಿ ಲೋಪವಾಗುತ್ತದೆಯೆಂದೂ ಹೇಳುವುದು ಶಾಸ್ತ್ರೀಯವಾದ ಉತ್ತರ.

ಸಮಾಸವು ಪದಗಳಿಗೆ ಬರುತ್ತದೆಯೇ ಹೊರತು ಪ್ರಕೃತಿಗಳಿಗಲ್ಲ. ಇದನ್ನೊಪ್ಪಲೇಬೇಕಾಗುತ್ತದೆ. ಇಲ್ಲದಿದ್ದರೆ, ಮಳೆಗಾಲ ಎಂಬಲ್ಲಿ ಮಳೆ ಶಬ್ದದಲ್ಲಿ ಸಂಬಂಧಾರ್ಥವೂ 'ಸತ್ಯ ಹೇಳು' ಎಂಬ ಕ್ರಿಯಾಸಮಾಸದ 'ಸತ್ಯ' ಶಬ್ದದಲ್ಲಿ ಕರ್ಮಾರ್ಥವೂ 'ಹಣೆಗಣ್ಣು' ಎಂಬಲ್ಲಿ 'ಹಣೆ' ಶಬ್ದದಲ್ಲಿ ಅಧಿಕರಣಾರ್ಥವೂ ಯಾವುದರಿಂದ ತೋರುತ್ತದೆ ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ಹೋಗುತ್ತದೆ. ಆದ್ದರಿಂದ ತಲೆಯ ಮುಂದು ಮುಂದಲೆ, ಪ್ಯೆಯ ಹೊರಗು ಹೊರಪ್ಯೆ ಎಂಬ ಅಂಶಿಸಮಾಸಗಳಲ್ಲಿ ಮುಂದು, ಹೊರಗು–ಮೊದಲಾದವು ಪದಗಳೆಂಬುದು ನಿಶ್ಚಿತ. ಇವುಗಳಿಗೆ ಪದತ್ವ ಸಿದ್ಧಿ ಹೇಗೆ? 'ಅವ್ಯಯಗಳಿಗೆ ಪದಸಂಜ್ಞೆ ಬರುತ್ತದೆ' ಎಂದು ಸೂತ್ರಾಂತರವನ್ನು ರಚಿಸುವುದು ಭಾಷಾಶಾಸ್ತ್ರದವರ ಪ್ರಕಾರ ಆವಶ್ಯಕವೇ ಆಗುತ್ತದೆ. ಮತ್ತು ಅವ್ಯಯಗಳಿಗೆ ಪ್ರತ್ಯಯಗಳು ಹತ್ತುವುದಿಲ್ಲ ಎಂಬ ಸೂತ್ರವನ್ನೂ ರಚಿಸಬೇಕಾಗುತ್ತದೆ. ಮೇಲ್ಕಂಡ ಸ್ಥಳಗಳಲ್ಲಿ ಪ್ರತ್ಯಯವಿರುವುದರಿಂದ ಕೆಲವು ಅವ್ಯಯಗಳಿಗೆ ಪ್ರತ್ಯಯ ಹತ್ತುತ್ತದೆಯೆಂದೂ ಹೇಳಬೇಕಾಗುತ್ತದೆ! ಈ ತಲೆ ನೋವಿನ ಪ್ರಯಾಸಕ್ಕಿಂತ ಸಿದ್ಧವಾಗಿರುವ ಪ್ರತ್ಯಯಗಳು ಕೆಲವೆಡೆ ಲೋಪ ಹೊಂದುತ್ತವೆಯೆನ್ನುವುದು ಸರಳವಾದ ಮತ್ತು ವೈಜ್ಞಾನಿಕವಾದ ಮಾರ್ಗ.

ಕನ್ನಡದವರು ಸಂಸ್ಕೃತ ವ್ಯಾಕರಣದ ಮೂಲತತ್ತ್ವಗಳನ್ನು ಅನುಸರಿಸಿದ್ದಾರೆಂಬುದನ್ನು ಗಮನದಲ್ಲಿಟ್ಟಿರಬೇಕು. ಭಾಷಾಶಾಸ್ತ್ರದವರ ಆಕ್ಷೇಪಗಳಿಗೆ ಸಂಸ್ಕೃತ ವ್ಯಾಕರಣದಲ್ಲಿ ಪಲವಾರು ಉತ್ತರಗಳುಂಟು. ವಿಸ್ತಾರಭೀತಿಯಿಂದ ಇಲ್ಲಿ ಪ್ರಸ್ತಾವಿಸಿಲ್ಲ. ವ್ಯಾಕರಣಶಾಸ್ತ್ರವು ಒಂದು ಮಹಾಯಂತ್ರ. ಸೂಕ್ಷ್ಮಾತಿಸೂಕ್ಷ್ಮಗಳಾದ ನಿಯಮಗಳಿಂದ ರಚಿತವಾಗಿರುವ ಈ ಶಾಸ್ತ್ರದಲ್ಲಿ ಮನಬಂದಂತೆ ಕೈಯಾಡಿಸಿದರೆ 'ಷಾಕ್' ಹೊಡೆಯುವುದು ನಿಶ್ಚಿತ. ಸಂಸ್ಕೃತದಲ್ಲಿ ಸಮಾಸವೆನ್ನುವುದಕ್ಕೆ ಇನ್ನೂ ಒಂದು ಪ್ರಯೋಜನ ಉಂಟು. ಉದಾತ್ತ, ಅನುದಾತ್ತ, ಸ್ವರಿತ–ಈ ಸ್ವರಗಳು ಸಮಾಸಸ್ವರಗಳಾಗಿ ಬರುತ್ತವೆ. ತತ್ಪುರುಷ, ಬಹುವ್ರೀಹಿ – ಮೊದಲಾದವುಗಳಿಗೆ ವಿಭಿನ್ನ ಸ್ವರಗಳು ಬರುತ್ತವೆ. 'ಸ್ತೋಕಾನ್ಮುಕ್ತಃ' ಎಂಬ ಶಬ್ದದಲ್ಲಿ ಪಂಚಮೀ ವಿಭಕ್ತಿ ಇದೆ. ಇದು ಸಮಾಸವಲ್ಲವೆಂದು ಭಾಷಾಶಾಸ್ತ್ರಿಗಳು ಸುಲಭವಾಗಿ ಹೇಳಿಬಿಡಬಹುದು. ಇದು 'ಅಲುಕ್ ಸಮಾಸ' ಎಂದು ವ್ಯಾಕರಣಶಾಸ್ತ್ರ ಹೇಳುತ್ತದೆ. ಈ ಅಲುಕ್ ಸಮಾಸದಲ್ಲಿ ಸ್ವರವೇ ಮುಖ್ಯ ಪ್ರಯೋಜನ. ಇದರ ಮೇಲೆ ತದ್ಧಿತ ಬಂದರೆ 'ಸ್ತೌಕಾನ್ಮುಕ್ತಿಃ' ಇತ್ಯಾದಿ ರೂಪಸಿದ್ಧಿಗಳೂ ಸಮಾಸದಿಂದಲೇ ಆಗತಕ್ಕವು. ಭಾಷಾಶಾಸ್ತ್ರದವರ 'ಋಣತತ್ತ್ವ, ಧನತತ್ತ್ವ'ಗಳ ಆಟವೇನೂ ಇಲ್ಲಿ ಸಾಗದು.